₹ 4 | ಪುಟ: 4 | ಸಂಪುಟ: 4 | ಸಂಚಿಕೆ 69 | newsbelagavi@gmail.com | 9900332089 | 9900332089



# ಬೆಳಗಾವಿ ವರದಿ

ಪ್ರಧಾನ ಸಂಪಾದಕರು: ಸತೀಶ್.ಬಿ.ಜಿ

BELAGAVI VARADI KANNADA DAILY

ಕನ್ನಡ ದಿನಪತ್ರಿಕೆ

Volume : 4 | Issue: 69 | Saturday, 29, APRIL, 2023 | RNI: KARKAN/2020/79084 | Regn,No:G-2/PMG/KA/NK/BM/139/2021-23 | 24

## ಕಾಂಗ್ರೆಸ್ ಗೆ ಜನರೇ ಪಾಠ ಕಲಿಸುತ್ತಾರೆ



ಹುಬ್ಬಳ್ಳಿ: 'ಕಾಂಗ್ರೆಸ್ ನಾಯಕರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಬೈಯ್ಯುವ ಮೂಲಕ ಜನರ ಭಾವನೆ ಕೆರಳಿಸುತ್ತಿದ್ದಾರೆ. ದೇಶದ ಜನರೇ ಅವ–ರಿಗೆ ತಕ್ಕ ಪಾಠ ಕಲಿಸುತ್ತಾರೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, '2007ರ ಗುಜರಾತ್ ಚುನಾವಣೆ ವೇಳೆ ಸೋನಿಯಾಗಾಂಧಿ ಮೋದಿ ಅವರಿಗೆ ಮೌತ್ ಕಾ ಸೌದಾಗಾರ್(ಸಾವಿನ ವ್ಯಾಪಾರಿ) ಎಂದು ಹೇಳಿದ್ದರು. 2014ರಲ್ಲಿ ಮಣಿಶಂಕರ ಅವರು ಚಾಯವಾಲಾ ಎಂದು ಕರೆದಿದ್ದರು. ಇದೀಗ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ವಿಷದ ಹಾವು ಎಂದು ಟೀಕಿಸಿದ್ದಾರೆ. ಮೋದಿ ಅವರನ್ನು ಟೀಕಿಸಿದಾಗಲೆಲ್ಲ ಮತಗಳು ಜಾಸ್ತಿ ಬಂದಿವೆ. ಕಾಂಗ್ರೆಸ್ ಮುಖಂಡರು ಹತಾಶರಾಗಿ ತಮ್ಮ ನೂರು ವರ್ಷದ ಸಂಸ್ಕೃತಿ ಗಾಳಿಗೆ ತೂರಿ ಇಲ್ಲ ಸಲ್ಲದ ಮಾತುಗಳನ್ನಾಡುತ್ತಿದ್ದಾರೆ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕಾಂಗ್ರೆಸ್ ನಾಯಕರು ಇನ್ನೂ ಗತಕಾಲದ ಅಧಿಕಾರದ ಮದದಲ್ಲಿಯೇ ಮೆರೆಯುತ್ತಿದ್ದಾರೆ. ಜನರನ್ನು ಗುಲಾಮರು ಎಂದು ತಿಳಿದು, ವೋಟ್ ಬ್ಯಾಂಕ್ ಮಾಡಿಕೊಂಡವರು. ತಾವು ಏನೇ ಹೇಳಿದರೂ, ಏನೇ ಮಾಡಿದರೂ ನಡೆಯುತ್ತದೆ ಎಂದು ಭಾವಿಸಿದ್ದಾರೆ. ಸಿದ್ದರಾಮಯ್ಯ, ಖರ್ಗೆ ನಲವತ್ತು, ಐವತ್ತು ವರ್ಷಗಳಿಂದ ರಾಜಕೀಯ ಜೀವನದಲ್ಲಿ ಇದ್ದಾರೆ. ಕೊನೆಯ ಹಂತದಲ್ಲಾದರೂ ಗೌರವ ಪೂರ್ವಕವಾಗಿ ನಡೆದುಕೊಂಡರೆ ಅವರಿಗೆ ಶೋಭೆ. ಇಲ್ಲದಿದ್ದರೆ ಇಷ್ಟು ವರ್ಷ ಏನು ಮಾಡಿದ್ದೀರಿ ಎಂದು ಜನ ಪ್ರಶ್ನಿಸುತ್ತಾರೆ' ಎಂದು ಎಚ್ಚರಿಕೆ ನೀಡಿದರು.

ಪರಿಶಿಷ್ಟ ವರ್ಗ ಮತ್ತು ಹಿಂದುಳಿದವರಿಗೆ ಮೀಸಲಾತಿ ಘೋಷಣೆ ಮಾಡಿರುವುದಿಂದ, ಕಾಂಗ್ರೆಸ್ ವೋಟ್ ಬ್ಯಾಂಕ್ ಛಿದ್ರವಾಗಿದೆ. ಅದರಿಂದ ಹತಾಶರಾಗಿ ಸಿದ್ದರಾಮಯ್ಯ ನನ್ನನ್ನು ಟೀಕಿಸುತ್ತಿದ್ದಾರೆ. ಪರಿಶಿಷ್ಟ ಮತ್ತು ಹಿಂದುಳಿದ ವರ್ಗದ ಎಲ್ಲ ಮತಗಳು ಅವರ ಕೈ ತಪ್ಪಿ, ಅವರ ನಿಜವಾದ ಡ್ಯಾಂ ಒಡೆದಿದೆ' ಎಂದು ಕುಟುಕಿದರು.

ಸಿದ್ದರಾಮಯ್ಯ ಮೇಲ್ಪಂಕ್ತಿ ನಾಯಕರಾಗುವುದನ್ನು ಬಿಟ್ಟು ಡಿ.ಕೆ. ಶಿವಕುಮಾರ್ ಅವರಿಗೆ ಆಂತರಿಕವಾಗಿ ಪೈಪೋಟಿ ನೀಡುತ್ತಿದ್ದಾರೆ. ಡಿಕೆಶಿಗಿಂತ ದೊಡ್ಡ ನಾಯಕ ಎಂದು ತೋರಿಸಿಕೊಳ್ಳಲು ಬಿಜೆಪಿ ಮುಖಂಡರ ವಿರುದ್ಧ ಟೀಕೆ, ಆರೋಪ ಮಾಡುತ್ತಿದ್ದಾರೆ' ಎಂದು ಹೇಳಿದರು.

ರಾಜ್ಯದಲ್ಲಿ ಲಿಂಗಾಯತ ಮುಖ್ಯಮಂತ್ರಿಯಿದ್ದು, ಭ್ರಷ್ಟಾಚಾರದ ಮೂಲ ಅವರೇ' ಎನ್ನುವ ಸಿದ್ದರಾಮಯ್ಯ ಹೇಳಿಕೆ ಬೊಮ್ಮಾಯಿ, 'ಲಿಂಗಾಯತ ಜಾಗೃತ ಸಮುದಾಯ. ಅವರ ಆರೋಪ ಯಾರೂ ಒಪ್ಪಲಾರರು. ಸಿದ್ದರಾಮಯ್ಯರ ವಿರುದ್ಧವೇ ?8 ಸಾವಿರ ಕೋಟಿಯ ಬಿಡಿಎ ರೀ–ಡೂ ಹಗರಣದ ಆರೋಪವಿದೆ. ಅವರೇ ನೇಮಿಸಿರುವ ನ್ಯಾ. ಕೆಂಪಣ್ಣ ಆಯೋಗದ ವರದಿಯೇ ಭ್ರಷ್ಟಾಚಾರದ ಬಗ್ಗೆ ಹೇಳುತ್ತಿದ್ದು, ವಿಧಾನಸಭೆ ಅಧಿವೇಶನದಲ್ಲಿ ಬಿಚ್ಚಿಟ್ಟಿದ್ದೇನೆ. ತಮ್ಮ ಮೇಲಿರುವ ಭ್ರಷ್ಟಾಚಾರಕ್ಕೆ ಉತ್ತರ ನೀಡಬೇಕಾಗುತ್ತದೆ ಎಂದು ನಮ್ಮ ಮೇಲೆ ಆರೋಪ ಮಾಡುತ್ತಿದ್ದಾರೆ' ಎಂದರು.

## ರಾಜ್ಯದಲ್ಲಿ ಇರುವುದು ಪರ್ಸಂಟೇಜ್ ಸರ್ಕಾರ: ರಾಹುಲ್ ಟೀಕೆ

ಕಲಬುರಗಿ: ರಾಜ್ಯದಲ್ಲಿ ಇರುವುದು ಕಳ್ಳ ಸರ್ಕಾರ. ಈ ಸರ್ಕಾರವನ್ನು ಜನರು ಆಯ್ಕೆ ಮಾಡಿದಲ್ಲ. ಶಾಸಕರನ್ನು ಹಣದಿಂದ ಖರೀದಿಸಿ ಸರ್ಕಾರ ರಚಿಸಿ, ಪ್ರತಿ ಸರ್ಕಾರಿ ಕೆಲಸದಲ್ಲೂ 40 ಪರ್ಸೆಂಟ್ ಕಮಿಷನ್ ಪಡೆದಿದೆ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ವಾಗ್ದಾಳಿ ನಡೆಸಿದರು.

ಜೇವರ್ಗಿಯಲ್ಲಿ ಶುಕ್ರವಾರ ನಡೆದ ಸಮಾವೇಶದಲ್ಲಿ ಮಾತನಾಡಿದ ಅವರು, ಈ ಸರ್ಕಾರಕ್ಕೆ 40 ಪರ್ಸೆಂಟ್ ಸರ್ಕಾರ ಎಂದು ಕರೆಯಬೇಕು. ಗುತ್ತಿಗೆದಾರ ಸಂಘಟನೆಯವರು 40 ಪರ್ಸೆಂಟ್ ಬಗ್ಗೆ ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದರೂ ಇದುವರೆಗೂ ಯಾವುದೇ ಪ್ರತ್ಯುತ್ತರ ಕೊಟ್ಟಿಲ್ಲ' ಎಂದರು.




ನಮ್ಮ ಸರ್ಕಾರ ಬರುವುದನ್ನು ಯಾ–ರಿಂದಲೂ ತಡೆಯಲು ಸಾಧ್ಯವಿಲ್ಲ. ಮೂರು ವರ್ಷ 40 ಪರ್ಸೆಂಟ್ ಕಮಿಷನ್ ಪಡೆದಿದ್ದಾರೆ. ಬಿಜೆಪಿಗೆ 40ರ ಸಂಖ್ಯೆ ತುಂಬ ಇಷ್ಟ. 40ರ ಸಂಖ್ಯೆಯ ಮೇಲೆ ಅವರಿಗೆ ಪ್ರೀತಿ, ಒಲವಿದೆ. ಹೀಗಾಗಿ, ಬಿಜೆಪಿಗೆ ಈ ಚುನಾವಣೆಯಲ್ಲಿ ಕರ್ನಾಟಕದ ಜನರು 40 ಸಿಟ್‌ಗಳನ್ನು ಮಾತ್ರ ಕೊಡಬೇಕು. ಕಾಂಗ್ರೆಸ್‌ಗೆ ಕಡಿಮೆ ಎಂದರೂ 150 ಸಿಟ್‌ಗಳನ್ನು ನೀಡಬೇಕು ಎಂದು ಮನವಿ ಮಾಡಿದರು.

ಕಲ್ಯಾಣ ಕರ್ನಾಟಕ ಭಾಗಕ್ಕೆ 371 ಜೆ ಕೊಡಲು ಆಗುವುದಿಲ್ಲ ಎಂದು ಎಲ್. ಕೆ ಅಡ್ವಾಣಿ ಅವರು ಹೇಳಿದ್ದರು. ನಾವು ಅಧಿಕಾರಕ್ಕೆ ಬಂದ ಬಳಿಕ ಅದನ್ನು ಅನುಷ್ಠಾನಕ್ಕೆ ತಂದಿದ್ದೇವೆ.ಇದರಿಂದ ಸಾವಿರಾರು ಎಂಜಿನಿಯರ್, ವೈದ್ಯರು, ವಕೀಲರಿಗೆ ಉದ್ಯೋಗದ ಅವಕಾಶ ಸಿಕ್ಕಿದೆ. ಆದರೆ, ಬಿಜೆಪಿ ಸರ್ಕಾರ 371 ಜೆ ಅನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲಿಲ್ಲ ಎಂದು ಆರೋಪಿಸಿದರು.

ಕೆಕೆಆರ್ಡಿಬಿಗೆ ರೂ 3 ಸಾವಿರ ಕೋಟಿ ಅನುದಾನ ನೀಡಲಾಗಿತ್ತು. ಶೇ 12ರಷ್ಟು ಅನುದಾನ ಮಾತ್ರ ಬಳಕೆಯಾಗಿದೆ. 50 ಸಾವಿರ ಉದ್ಯೋಗಳು ಭರ್ತಿಯಾಗದೆ ಉಳಿದಿವೆ. ನಾವು ಅಧಿಕಾರಕ್ಕೆ ಬಂದರೆ 50 ಸಾವಿರ ಹುದ್ದೆಗಳನ್ನು ಭರ್ತಿ ಮಾಡುತ್ತೇವೆ. ಈ ಭಾಗಕ್ಕೆ ಐಐಟಿ, ಐಐಎಂ ತರುತ್ತೇವೆ. ಪ್ರತಿ ವರ್ಷ ರೂ 5 ಸಾವಿರ ಕೋಟಿ ಅನುದಾನ ಕೊಡುತ್ತೇವೆ. ಪ್ರತಿ ಗ್ರಾಮ ಪಂಚಾಯಿತಿಗೆ ರೂ 1 ಕೋಟಿ ನೀಡಲಾಗುವುದು ಎಂದು ಭರವಸೆ ನೀಡಿದರು.

ರಾಜ್ಯದ ಜನರಿಗೆ ನಾಲ್ಕು ಭರವಸೆಗಳನ್ನು ಕೊಟ್ಟಿದ್ದೇವೆ. ಪ್ರಧಾನಿ ಮೋದಿ ಅವರು ಈ ಭರವಸೆಗಳನ್ನು ಈಡೇರಿಸಲು ಸಾಧ್ಯವಿಲ್ಲ ಎನ್ನುತ್ತಾರೆ. ಬಿಜೆಪಿಯ ಶಾಸನದ ಪ್ರಕಾರ ಇಂತಹ ಯೋಜನೆಗಳು ಈಡೇ–ರಿಸಲು ಸಾಧ್ಯವಿಲ್ಲ. ಏಕೆಂದರೆ ಅವರು 40 ಪರ್ಸೆಂಟ್ ಕಳ್ಳವು ಮಾಡುತ್ತಾರೆ. 40 ಪರ್ಸೆಂಟ್ ಕದಿಯುವುದರಿಂದ ಇಂತಹ ಯೋಜನೆಗಳನ್ನು ಜಾ–ರಿಗೆ ತರಲು ಸಾಧ್ಯವಾಗುವುದಿಲ್ಲ ಎಂದು ವ್ಯಂಗ್ಯವಾಡಿದರು.

## ಗ್ರಾಮೀಣ ಕ್ಷೇತ್ರದಲ್ಲಿ ನ್ಯಾಯ–ಅನ್ಯಾಯದ ಮಧ್ಯ ಸ್ಪರ್ಧೆ



ಬೆಳಗಾವಿ: ನಗರಕ್ಕೆ ಹೊಂದಿಕೊಂಡಿರುವ ಬೆಳಗಾವಿ ಗ್ರಾಮೀಣ ಮತಕ್ಷೇತ್ರದಲ್ಲಿ ಚುನಾವಣೆಯ ಪ್ರಚಾರ ಹಾಗೂ ಗೆಲುವಿನ ತಂತ್ರಗಳು ಎಲ್ಲಾ ಪಕ್ಷಗಳಿಂದಲೂ ಜೋರಾಗಿಯೇ ನಡೆಯುತ್ತಿವೆ.

ಮೇಲ್ನೋಟಕ್ಕೆ ಇಲ್ಲಿ ಹಲವಾರು ಪಕ್ಷಗಳು ಸ್ಪರ್ಧೆ ಮಾಡಿದ್ದರೂ ಸಹಿತ, ವಾಸ್ತವಿಕವಾಗಿ ರಾಷ್ಟ್ರೀಯ ಪಕ್ಷಗಳಾದ ಕಾಂಗ್ರೆಸ್ ಮತ್ತು ಬಿಜೆಪಿಯ ಮಧ್ಯ ನೇರ ಹಣಾಹಣಿ ಇದೆ. ಒಂದುಕಡೆ ಗ್ರಾಮೀಣ ಕ್ಷೇತ್ರದಲ್ಲಿ ಹಾಲಿ ಶಾಸಕಿಯವರು ನಾನು ಕ್ಷೇತ್ರದಲ್ಲಿ ತುಂಬಾ ಅಭಿವೃದ್ಧಿ ಮಾಡಿದ್ದೇನೆ ಎನ್ನುತ್ತಾರೆ.

ಮತ್ತೊಂದು ಕಡೆ ಬಿಜೆಪಿಗರು ಹೇಳುವ ಪ್ರಕಾರ, ಬರಿ ಪೇಪರ್ ಮೇಲೆ, ಬಿಲ್ಲು ಪಾಸ್ ಮಾಡಿಸಿಕೊಳ್ಳುವದಕ್ಕಾಗಿ ಅಭಿವೃದ್ಧಿ ಆಗಿದೆ ಎಂದು ಸುಳ್ಳು ಹೇಳಿಕೊಳ್ಳುವ ಶಾಸಕರು, ಬಂದು ಗ್ರಾಮಗಳಲ್ಲಿ ಪ್ರತ್ಯಕ್ಷವಾಗಿ ನೋಡಿದರೆ ತಿಳಿಯುತ್ತೆ, ಯಾವ ರೀತಿ ಕ್ಷೇತ್ರ ಹಿಂದುಳಿದಿದೆ ಅಂತಾ ತಿಳಿಯುತ್ತೆ ಎನ್ನುತ್ತಾರೆ.

ಇನ್ನು ಕ್ಷೇತ್ರದ ಮತದಾರರನ್ನು ಈ ವಿಧಾನಸಭಾ ಚುನಾವಣೆಯ ಬಗ್ಗೆ ಕೇಳಿದಾಗ, ಸರ್ ಇದು ನ್ಯಾಯ ಮತ್ತು ಅನ್ಯಾಯದ ವಿರುದ್ಧ ನಡೆಯುವ ಸ್ಪರ್ಧೆಯಾಗಿದೆ, ಮೋಸ, ನಾಟಕ, ಅನ್ಯಾಯ, ನಂಬಿಕೆದ್ರೋಹ, ಕೈಕೊಟ್ಟವರು, ಷಡ್ಯಂತ್ರ ಮಾಡಿದವರು, ರಾಜಕೀಯ ಲಾಭಕ್ಕಾಗಿ, ಸ್ವಾರ್ಥ–ರ್ಕಕ್ಕಾಗಿ, ಉಪಕಾರ ಮಾಡಿದವರನ್ನು ತೇಜೋವಧೆ ಮಾಡಿದವರು ಒಂದು ಕಡೆಯಾದರೆ, ತಮಗೆ ಎಷ್ಟೇ ಅನ್ಯಾಯ, ಅವಮಾನ ಆದರೂ ಹಿಂದೆ ಸರಿಯದೇ, ಷಡ್ಯಂತ್ರ ಮಾಡಿ, ಮೋಸ ಮಾಡಿದವರಿಗೆ, ಕೇಡು ಮಾಡದೇ, ಅವರ ಹಾಗೆ ಸಣ್ಣತನದ ವಿಚಾರಕ್ಕೆ ಕೈ ಹಾಕದೆ, ಚುನಾವಣೆಯಲ್ಲಿ ಜನರ ಬಳಿ ನ್ಯಾಯಕ್ಕಾಗಿ ಕೈ ಮುಗಿದು ನಿಂತ ನಾಯಕ ಇನ್ನೊಂದು ಕಡೆ.

ಹೀಗೆ ನಮ್ಮ ಗ್ರಾಮೀಣ ಕ್ಷೇತ್ರದ ಚುನಾವಣಾ ಸ್ಪರ್ಧೆ ಇರುವಾಗ, ನ್ಯಾಯ ಮತ್ತು ಅನ್ಯಾಯದ ಈ ಹೋರಾಟದಲ್ಲಿ,, ಜನರ ತೀಪು ಅಷ್ಟೇ ಅಲ್ಲಾ, ಆ ದೇವರ ತೀಪು ಕೂಡಾ ಸೂಕ್ತ ರೀತಿಯಲ್ಲೇ ಇರುತ್ತದೆ ಎಂಬ ಅಭಿಪ್ರಾಯವನ್ನು ಮತದಾರರು ನೀಡಿದ್ದಾರೆ.

## ಕಾಂಗ್ರೆಸ್ ಕೆಂಗಣ್ಣಿಗೆ ಗುರಿಯಾದ ಶಾಸಕ ಯತ್ನಾಳ



ಬೆಂಗಳೂರು: ವಿಧಾನಸಭಾ ಚುನಾವಣಾ ಕಾವು ದಿನೇ ದಿನೇ ಏರಿಕೆಯಾಗುತ್ತಿದ್ದು, ಪಕ್ಷಗಳ ನಾಯಕರ ಆರೋಪ ಪ್ರತ್ಯಾರೋಪವೂ ಹೆಚ್ಚಾಗಿದೆ. ಮಾತಿನ ಭರದಲ್ಲಿ ವಿವಾದಾತ್ಮಕ ಹೇಳಿಕೆಗಳನ್ನು ನೀಡುತ್ತಿರುವುದೂ ಕಂಡುಬರುತ್ತಿದೆ.

ಗುರುವಾರವಷ್ಟೇ ಮಲ್ಲಿಕಾರ್ಜುನ ಖರ್ಗೆ, ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಷ ಸರ್ಪ ಎಂದು ಟೀಕಿಸಿದ್ದು, ಇದಕ್ಕೆ ಬಿಜೆಪಿ ನಾಯಕರಿಂದ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಬಳಿಕ ಮಲ್ಲಿಕಾರ್ಜುನ ಖರ್ಗೆ ಕ್ಷಮೆ ಕೋರಿದ್ದರು. ಇದೀಗ ತಮ್ಮ ವಿವಾದಾತ್ಮಕ ಹೇಳಿಕೆಗಳಿಂದಲೇ ಸದಾ ಸುದ್ದಿಯಲ್ಲಿರುವ ಬಸನಗೌಡ ಪಾಟೀಲ್ ಯತ್ನಾಳ್, ಕಾಂಗ್ರೆಸ್ ನಲ್ಲಿ ರಾಹುಲ್ ಗಾಂಧಿ ಹುಚ್ಚ ಎಂದು ಹೇಳುವ ಮೂಲಕ ಕಾಂಗ್ರೆಸ್ ನವರ ಕೆಂಗಣ್ಣಿಗೆ ಗು–ರಿಯಾಗಿದ್ದಾರೆ.

ಕೊಪ್ಪಳದಲ್ಲಿ ಮಾತನಾಡುವ ವೇಳೆ ಬಸವರಾಜ ರಾಯರೆಡ್ಡಿ ಅವರನ್ನು ಟೀಕಿಸಿದ ಅವರು, ಅಲ್ಲಿ ರಾಹುಲ್ ಹುಚ್ಚ, ಇಲ್ಲಿ ಟಿಕ್ಕ ರಾಯರೆಡ್ಡಿ ಎಂದು ಹೇಳಿದ್ದು ಮೋದಿ ವಿಷ ಸರ್ಪವಾದರೆ ಸೋನಿಯಾ ಗಾಂಧಿ ಏನು ವಿಷಕನ್ಯೆನಾ ಎಂದು ಪ್ರಶ್ನಿಸಿದ್ದಾರೆ.

## ಶಾಸಕ ಯತ್ನಾಳ ಉಚ್ಛಾಟನೆಗೆ ಡಿ.ಕೆ. ಶಿವಕುಮಾರ್ ಆಗ್ರಹ



ಬೆಂಗಳೂರು: ಸೋನಿಯಾ ಗಾಂಧಿ ವಿಷಕನ್ಯೆ ಎಂಬ ಹೇಳಿಕೆ ಮೂಲಕ ಇಡೀ ಸ್ತ್ರೀ ಕುಲವನ್ನೇ ಅವಮಾನಿಸಿರುವ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರನ್ನು ಬಿಜೆಪಿಯಿಂದ ತಕ್ಷಣ ಉಚ್ಛಾಟಿಸಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು,'ಯತ್ನಾಳ ಅವರು ಭಾರತದ ಎಲ್ಲ ಮಗಿಳೆಯರನ್ನು ಅವಮಾನಿಸಿದ್ದಾರೆ. ಈ ಘಟನೆಗಾಗಿ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ದೇಶದ ಕ್ಷಮೆ ಕೋರಬೇಕು. ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು ತಕ್ಷಣವೇ ಯತ್ನಾಳ ಅವರನ್ನು ಉಚ್ಛಾಟಿಸಬೇಕು' ಎಂದು ಒತ್ತಾಯಿಸಿದರು.

ಸೋನಿಯಾ ಅವರು ಈ ದೇಶದ ಅಖಂಡತೆ ಮತ್ತು ಸಮಗ್ರತೆಗಾಗಿ ಅತ್ತೆ ಹಾಗೂ ಗಂಡನನ್ನು ಕಳೆದುಕೊಂಡರು. ಎರಡು ಬಾರಿ ದೇಶದ ಪ್ರಧಾನಿ ಹುದ್ದೆ ಅಲಂಕರಿಸುವ ಅವಕಾಶ ಸಿಕ್ಕರೂ ಡಾ.ಮನಮೋಹನ್ ಸಿಂಗ್ ಅವರಂತಹ ಶ್ರೇಷ್ಠ ಆರ್ಥಿಕ ತಜ್ಞನಿಗೆ ಅವಕಾಶ ಕಲ್ಪಿಸಿದರು. ಅಂತಹ ಧೀಮಂತ ಮಹಿಳೆಯ ಕು–ರಿತು ಯತ್ನಾಳ ಕೀಳುಮಟ್ಟದ ಹೇಳಿಕೆ ನೀಡಿರುವುದು ಅಕ್ಷಮ್ಯ ಎಂದರು. ಎಚ್ಚರಿಕೆ ಇರಲಿ: 'ಯತ್ನಾಳ ನಿನ್ನ ಹೇಳಿಕೆಗೆ ಈ ರಾಜ್ಯದ ಜನರು, ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ಹೇಗೆ ಪ್ರತಿಕ್ರಿಯಿಸುತ್ತಾರೋ ನನಗಂತೂ ಗೊತ್ತಿಲ್ಲ' ಎಂದು ಏಕವಚನದಲ್ಲೇ ಎಚ್ಚರಿಕೆ ನೀಡಿದರು.

## ಜನಾಭಿಪ್ರಾಯದಂತೆ ಕ್ಷೇತ್ರದ ಅಭಿವೃದ್ಧಿ ಮಾಡಿದ್ದೇನೆ: ಲಕ್ಷ್ಮೀ ಹೆಬ್ಬಾಳಕರ್

ಬೆಳಗಾವಿ: ನಾನು ಕ್ಷೇತ್ರದಲ್ಲಿ ರಸ್ತೆ, ಚರಂಡಿ, ಕುಡಿಯುವ ನೀರು ಮೊದಲಾದ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟಿದ್ದಕ್ಕೆ ಕೆಲವರು ಟೀಕಿಸುತ್ತಿದ್ದಾರೆ. ಮೂಲಭೂತ ಸೌಲಭ್ಯಗಳಿಲ್ಲದಿದ್ದರೆ ಜನರು ಬದುಕುವುದು ಎಷ್ಟು ಕಷ್ಟ ಎನ್ನುವುದು ನನಗೆ ಗೊತ್ತು. ಹಾಗಾಗಿ ಪ್ರತಿಯೊಂದು ಕೆಲಸ ಮಾಡುವಾಗಲೂ ಆಯಾ ಪ್ರದೇಶದ ಜನರ ಅಭಿಪ್ರಾಯ ಪಡೆದೇ ಮಾಡಿದ್ದೇನೆ ಎಂದು ಬೆಳಗಾವಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಶಾಸಕಿ ಲಕ್ಷ್ಮೀ ಹೆಬ್ಬಾಳಕರ್ ಹೇಳಿದ್ದಾರೆ.

ದೇಸೂರ್ ಮತ್ತು ನಾಗೇರಹಾಳದಲ್ಲಿ ಶಾಸಕಿ, ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮೀ ಹೆಬ್ಬಾಳಕರ್ ಶುಕ್ರವಾರ ಪ್ರಚಾರ ನಡೆಸಿ ಮಾತನಾಡುತ್ತಿದ್ದರು.



ಯಾವುದೇ ಪ್ರದೇಶದಲ್ಲಿ ಮೂಲಭೂತ ಸೌಲಭ್ಯ ಕಲ್ಪಿಸಲು ಮೊದಲ ಆದ್ಯತೆ ನೀಡಬೇಕಾಗುತ್ತದೆ. ಅಭಿವೃದ್ಧಿಯ ಕಲ್ಪನೆ ನನಗೂ ಇದೆ, ನನ್ನ ಕ್ಷೇತ್ರದ ಜನರಿಗೂ ಇದೆ. ಹಾಗಾಗಿ ಜನರು ಅವರಿಗೆ ಯಾವುದು ಅಗತ್ಯವೋ ಅದನ್ನು ಕೇಳುತ್ತಾರೆ, ಅವರು ಏನನ್ನು ಕೇಳುತ್ತಾರೋ ಅದನ್ನು ನಾನು ಮಾಡಿಕೊಡುತ್ತೇನೆ ಎಂದು ಹೆಬ್ಬಾಳಕರ್ ಹೇಳಿದರು.

ಹತ್ತಾರು ವರ್ಷಗಳಿಂದ ಮೂಲಭೂತ ಸೌಲಭ್ಯಗಳೇ ಇಲ್ಲದೆ ಜನರು ಕಷ್ಟಪಡುತ್ತಿದ್ದರು. ನಾನು ಮೊದಲ ಅವಧಿಯಲ್ಲಿ ಅದಕ್ಕೆ ಆದ್ಯತೆ ನೀಡಿದ್ದೇನೆ. ಮುಂದಿನ ದಿನಗಳಲ್ಲಿ ಕ್ಷೇತ್ರಕ್ಕೆ ದೊಡ್ಡ ದೊಡ್ಡ ಯೋಜನೆಗಳನ್ನು ತರಲಿದ್ದೇನೆ. ಯುವ ಜನ–ರಿಗೆ ಉದ್ಯೋಗ ಕಲ್ಪಿಸುವ ಕೆಲಸ ಮಾಡಲಿದ್ದೇನೆ. ಏನಿದ್ದರೂ ನಿಮ್ಮೊಂದಿಗೆ ಚರ್ಚಿಸಿಯೇ ಮುಂದಡಿ ಇಡುತ್ತೇನೆ. ನಿಮ್ಮ ಆದೇಶದಂತೆ ನಡೆಯುತ್ತೇನೆಯೇ ವಿನಃ ಬೇರೆಯವರದಲ್ಲ ಎಂದು ಅವರು ತಿಳಿಸಿದರು.

ಮೇ 10ರಂದು ನಡೆಯಲಿರುವ ವಿಧಾನಸಭೆ ಚುನಾವಣೆಯಲ್ಲಿ 4ನೇ ನಂಬರ್ ನಲ್ಲಿರುವ ನನ್ನ ಹೆಸರಿನ ಮುಂದೆ ಇರುವ ಬಟನ್ ಒತ್ತುವ ಮೂಲಕ ಹಸ್ತದ ಗುರುತಿಗೆ ಮತ ನೀಡಿ. ನಾವೆಲ್ಲರೂ ಒಟ್ಟಿಗೇ ಮುಂದೆ ಸಾಗೋಣ. ಕ್ಷೇತ್ರವನ್ನು ಸಮಗ್ರವಾಗಿ ಅಭಿವೃದ್ಧಿಯತ್ತ ಕೊಂಡೊಯ್ಯೋಣ ಎಂದು ಹೆಬ್ಬಾಳಕರ್ ವಿನಂತಿಸಿದರು.

ಯುವ ಕಾಂಗ್ರೆಸ್ ಮುಖಂಡ ಮೃಣಾಲ ಹೆಬ್ಬಾಳಕರ್ ಹಾಗೂ ಸ್ಥಳೀಯ ಮುಖಂಡರಾದ ನಾಮದೇವ ಅಂಕಲೇಕರ್, ಓಮಣ್ಣ ಕರ್ಲೇಕರ್, ಯಲ್ಲೇಶಿ ಹಾಗೇದಾಳ, ಬಸು ಹಂಪಣ್ಣವರ್, ಪುನ್ನಪ್ಪ ಪಾಟೀಲ, ದೇವೇಂದ್ರ ಪಾಟೀಲ, ನಾಗಪ್ಪ ಬೇಕಿನಕೇರಿ, ದೇವೇಂದ್ರ ಪಾಟೀಲ, ಪರಶುರಾಮ ಕೋಲ್ಕಾರ, ವೆಂಕಟ್ ಪಾಟೀಲ, ಬರಮಾನಿ ಪಾಟೀಲ, ಸಾತೇರಿ ಕಾಶೇಕರ್, ಗಣಪತ್ ಪಾಟೀಲ, ಜ್ಯೋತಿಬಾ ಕಾಶೇಕರ್, ಮನೋಜ್ ಸಾವಂತ್, ಅನಿಲ್ ಪಾಟೀಲ, ಶಾಂತಾರಾನ ಲಕ್ಕೇಬೈಲಕರ್, ನಾರಾಯಣ ಕಾಶೇಕರ್, ಗಜಾನನ ವಶೂಲಕರ್, ನಾಮದೇವ ಅವಚಾರಿ, ಬುಜಂಗ್ ಗುರವ್, ದೌಲತ್ ಕೋಲ್ಕಾರ, ಶ್ಯಾಮ್ ಗಾವ್ಕರ್, ಬಾಪು ಪಾಟೀಲ ಮೊದಲಾದವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಬಿಸಿ ಕೆಂಡದಂತಾದ ಅಥಣಿ ಕ್ಷೇತ್ರದ ಪೈಪೋಟಿ



ಬೆಳಗಾವಿ: ಇದುವರೆಗೂ 14 ವಿಧಾನಸಭಾ ಚುನಾವಣೆ ಮತ್ತು ಒಂದು ಉಪಚುನಾವಣೆಯನ್ನು ಕಂಡಿರುವ ಅಥಣಿ ಕ್ಷೇತ್ರ, ತನ್ನ 16ನೇ ಪ್ರತಿನಿಧಿಯನ್ನು ಆಯ್ಕೆ ಮಾಡಲು ಸಜ್ಜಾಗುತ್ತಿದೆ.

ಕಾಂಗ್ರೆಸ್‌ನಲ್ಲಿದ್ದ ಮಹೇಶ್ ಕುಮಟಳ್ಳಿ ಮತ್ತು ಬಿಜೆಪಿಯಲ್ಲಿದ್ದ ಲಕ್ಷ್ಮಣ ಸವದಿ ಇಬ್ಬರೂ ರಾಜಕೀಯದಲ್ಲಿ ಬದ್ಧ ವೈರಿಗಳು. ಹಲವು ಬಾರಿ ಪರಸ್ಪರ ಪೈಪೋಟಿ ನಡೆಸಿರುವ ಇಬ್ಬರೂ ಸೋಲು, ಗೆಲುವು ಎರಡನ್ನೂ ಕಂಡಿದ್ದಾರೆ. 2018ರಲ್ಲಿ ಬಿಜೆಪಿಯ ಲಕ್ಷ್ಮಣ ಸವದಿ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿಯಾಗಿ ಗೆದ್ದಿದ್ದ ಮಹೇಶ್ ಕುಮಠಳ್ಳಿ ನಂತರ ಆಪರೇಷನ್ ಕಮಲಕ್ಕೆ ಗುರಿಯಾಗಿ ಬಿಜೆಪಿ ಸೇರಿದ್ದರು. ರಾಜಕೀಯ ಶತ್ರುಗಳು ಒಂದೇ ಪಕ್ಷದ ಭಾಗವಾಗಿದ್ದರು. ಅದರ ಜೊತೆಗೆ 2023ರ ಚುನಾವಣೆಯಲ್ಲಿ ಲಕ್ಷ್ಮಣ ಸವದಿಗೆ ಟಿಕೆಟ್ ನಿರಾಕರಿಸಲಾಯಿತು. ಇದರಿಂದ ಕೆರಳಿದ ಲಕ್ಷ್ಮಣ ಸವದಿ ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಈ ಮೂಲಕ ಅಥಣಿ ಕ್ಷೇತ್ರದ ರಾಜಕೀಯ ಮಗ್ಗಲು ಬದಲಿಸಿದಂತಾಗಿದೆ. ಅಥಣಿ ವಿಧಾನಸಭಾ ಕ್ಷೇತ್ರ ಇತಿಹಾಸ: ಕೃಷ್ಣಾ ನದಿಯ ದಂಡೆಯಲ್ಲಿರುವ ವಿಧಾನಸಭಾ ಕ್ಷೇತ್ರಗಳಲ್ಲಿ ಅಥಣಿಯೂ ಒಂದು. ಮಹಾರಾಷ್ಟ್ರಕ್ಕೆ ಹೊಂದಿಕೊಂಡಿರುವ ಅಥಣಿಯು ಬೆಳಗಾವಿ ಜಿಲ್ಲೆಯಲ್ಲಿಯ ಅತಿ ದೊಡ್ಡ ತಾಲೂಕು ಕೂಡ ಹೌದು. ಪಶ್ಚಿಮ ಘಟ್ಟಗಳ ಸಾಲು ಹಾಗೂ ಕೃಷ್ಣಾ ನದಿಯಿಂದಾಗಿ ಅಥಣಿ ಹಸಿರಾಗಿ ಕಂಗೊಳಿಸುತ್ತಿದೆ. ಇಲ್ಲಿ ಕಬ್ಬು ಬೆಳೆಗಾಗರೇ ಹೆಚ್ಚಿನ ಸಂಖ್ಯೆಯಲ್ಲಿದ್ದು, ಮೂರು ಸಕ್ಕರೆ ಕಾರ್ಖಾನೆಗಳಿವೆ. ಕಬ್ಬಿಗೆ ಸರಿಯಾದ ಬೆಂಬಲ ಬೆಲೆ ಸಿಗುತ್ತಿಲ್ಲವೆಂದು ರೈತರು ಆರೋಪಿಸುತ್ತಲೇ ಇದ್ದಾರೆ.

ಕಬ್ಬು ಬೆಳೆಗಾರರಿಗಾಗಿ ಹೋರಾಟ ಮಾಡುವಂತ ಆತ್ಮಸ್ಥೈರ್ಯವುಳ್ಳ ಜನಪ್ರತಿನಿಧಿಯನ್ನು ಆಯ್ಕೆ ಮಾಡಲು ಕ್ಷೇತ್ರದ ಜನರು ಕಾಯುತ್ತಿದ್ದಾರೆ. ಕ್ಷೇತ್ರದ ಮತದಾರರ ವಿವರ: ಮಹಾರಾಷ್ಟ್ರ ಗಡಿಯಲ್ಲಿರುವ ಅಥಣಿ ವಿಧಾನಸಭಾ ಕ್ಷೇತ್ರವು ರಾಜಕೀಯ ಮೀಸಲಿನಲ್ಲಿ ಸಾಮಾನ್ಯ ಕ್ಷೇತ್ರವಾಗಿದೆ.

ಇಲ್ಲಿ ಲಿಂಗಾಯತ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಹಾಗಾಗಿ, ಎಲ್ಲ ಪಕ್ಷಗಳೂ ಈ ಕ್ಷೇತ್ರದಲ್ಲಿ ಲಿಂಗಾಯತ ಅಭ್ಯರ್ಥಿಗಳಿಗೇ ಹೆಚ್ಚಾಗಿ ಮಣೆ ಹಾಕುತ್ತವೆ. ಕ್ಷೇತ್ರದಲ್ಲಿ ಸುಮಾರು 2.20,578 ಮತದಾರರಿದ್ದಾರೆ. ಅವರಲ್ಲಿ ಒಂದು ಲಕ್ಷ ಲಿಂಗಾಯತರು, 40 ಸಾವಿರ ಮರಾಠಿಗರು, 39 ಸಾವಿರ ಪರಿಶಿಷ್ಟ ಜಾತಿ, 8 ಸಾವಿರ ಪರಿಶಿಷ್ಟ ಪಂಗಡ ಹಾಗೂ 28 ಸಾವಿರ ಮುಸ್ಲಿಂ ಮತದಾರರಿದ್ದಾರೆ. ಈ ಕ್ಷೇತ್ರದಲ್ಲಿ ಲಿಂಗಾಯತರ ಪಾರುಪತ್ಯ ಎಂದು ಅಂ–ದಾಜಿಸಲಾಗಿದೆ.

## ಏಪ್ರಿಲ್ 29ಕ್ಕೆ ಪ್ರಿಯಾಂಕ ಗಾಂಧಿ ರೋಡ್ ಶೋ



ಕುಂದಗೋಳ: ವಿಧಾನಸಭೆ ಚುನಾವಣೆ ಹಿನ್ನೆಲೆ ಏ. 29ರಂದು ಶಾಸಕಿ ಕುಸುಮಾವತಿ ಪರ ಮತಯಾಚನೆ ಮಾಡಲು ಕುಂದಗೋಳ ಪಟ್ಟಣಕ್ಕೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕ್ ಗಾಂಧಿ ವಾದ್ರಾ ಅವರು ಆಗಮಿಸಲಿದ್ದಾರೆ. ಅಲ್ಲದೆ ಬೃಹತ್ ರೋಡ್ ಶೋ ನಡೆಸುವ ಮೂಲಕ ಅಲ್ಲಿನ ಜನರ ಬಳಿ ಚರ್ಚೆ ನಡೆಸಲಿದ್ದಾರೆ ಎಂದು ಕುಂದಗೋಳ ಚುನಾವಣೆ ಉಸ್ತುವಾರಿ ಪಿ.ವಿ. ಮೋಹನ್ ಮಾಹಿತಿ ನೀಡಿದ್ದಾರೆ. ಕುಂದಗೋಳ ಪಟ್ಟಣದಲ್ಲಿ ಮಾಧ್ಯಮಗೋಷ್ಠಿ ಉದ್ದೇಶಿಸಿ ಮಾತನಾಡಿದ ಪಿ.ವಿ.ಮೋಹನ್, ಏಪ್ರೀಲ್ 29ರಂದು ಬೆಳಗ್ಗೆ 11 ಗಂಟೆಗೆ ಹುಬ್ಬಳ್ಳಿ ಲಕ್ಷ್ಮೇಶ್ವರ ರಾಜ್ಯ ಹೆದ್ದಾ–ರಿಯ ಜೆ.ಎಸ್.ಎಸ್.ವಿದ್ಯಾಪೀಠದಿಂದ ಮಾರ್ಕೇಟ್‌ವರೆಗೆ 2 ಕಿಲೋ ಮೀಟರ್ ರೋಡ್ ಶೋ ನಡೆಯಲಿದ್ದು, ಈ ವೇಳೆ 15 ಸಾವಿರಕ್ಕೂ ಅಧಿಕ ಜನ ಸೇರಿ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡಲಿದ್ದಾರೆ ಎಂದರು.

## ಇಂದಿನಿಂದ ಬ್ಯಾಲೆಟ್ ಪೇಪರ್ ವೋಟಿಂಗ್ ಆರಂಭ

ಬೆಂಗಳೂರು: ವಿಧಾನಸಭೆ ಚುನಾವಣೆ ಕಾವು ಜೋರಾಗಿದ್ದು, ಎಲ್ಲಾ ಪಕ್ಷಗಳು ಅಬ್ಬರದ ಪ್ರಚಾರದಲ್ಲಿ ತೊಡಗಿವೆ. ಮೇ 10 ರಂದು ಮತದಾನ ನಡೆಯಲಿದೆ. ಮೇ 13 ಕ್ಕೆ ಫಲಿತಾಂಶ ಹೊರ ಬೀಳಲಿದೆ.

2023ನೇ ಸಾಲಿನ ಸಾರ್ವತ್ರಿಕ ಚುನಾವಣೆಗೆ ಮತದಾನ ನಾಳೆಯಿಂದ ಆರಂಭವಾಗಲಿದೆ. ಬ್ಯಾಲೆಟ್ ಪೇಪರ್ ವೋಟಿಂಗ್ ನಾಳೆಯಿಂದ ಆರಂಭವಾಗಲಿದ್ದು, ಏಪ್ರಿಲ್ 29 ರಿಂದ ಮೇ 6 ರವರೆಗೆ ಬ್ಯಾಲೆಟ್ ಮತದಾನಕ್ಕೆ ಅವಕಾಶವಿದೆ. ರಾಜ್ಯ ಸೇರಿದಂತೆ ರಾಜಧಾನಿ ಬೆಂಗಳೂ–ರಿನಲ್ಲೂ ಬ್ಯಾಲೆಟ್ ಪೇಪರ್ ವೋಟಿಂಗ್ ಗೆ ಅವಕಾಶ ಇದೆ. 80 ವರ್ಷ ಮೇಲ್ಪಟ್ಟ ವೃದ್ಧರು, ವಿಕಲ ಚೇತನರಿಗೆ ಹಾಗೂ ಚುನಾವಣೆಯಲ್ಲಿ ಭಾಗವಹಿಸುವ ಪೊಲೀಸ್, ಚುನಾವಣೆ ಸಿಬ್ಬಂದಿಗೆ ನಾಳೆಯಿಂದ ಮತದಾನಕ್ಕೆ ಅವಕಾಶ ಸಿಕ್ಕಿದೆ. 80 ವರ್ಷ ಮೇಲ್ಪಟ್ಟ ವೃದ್ಧರಿಗೆ ಹಾಗೂ ಅಂಗವಿಕಲರಿಗೆ ಮನೆ ಬಳಿಯೇ ಮತ ಚಲಾಯಿಸುವ ವ್ಯವಸ್ಥೆಯನ್ನು ಕಲ್ಪಿಸಲಾಗಿದೆ.

80 ವರ್ಷ ಮೇಲ್ಪಟ್ಟ ವೃದ್ಧರಿಗೆ ಚುನಾವಣಾ ಅಯೋಗದ ಸಿಬ್ಬಂದಿಗಳು ಅವರ ಮನೆ ಬಾಗಿಲಿನಲ್ಲಿಯೇ ಬ್ಯಾಲೆಟ್ ಪೇಪರ್ ನೀಡುತ್ತಾರೆ. ಈ ಮೂಲಕ ಹಿರಿಯ ನಾಗರೀಕರು ಮತ್ತು ವಿಕಲಚೇತನರಿಗೆ ಗೌಪ್ಯವಾಗಿ ಮತ ಚಲಾವಣೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ಗೌಪ್ಯ ಮತ ಚಲಾಯಿಸುವಾಗ ಚುನಾವಣೆ ಸಿಬ್ಬಂದಿ ಸೇರಿದಂತೆ ಸ್ಥಳೀಯ ಪೊಲೀಸರು ಹಾಜರಾಗಲಿದ್ದಾರೆ. ಮನೆಯಲ್ಲೇ ಮತದಾನ ಮಾಡುವಾಗ ವಿಡಿಯೋ ರೆಕಾರ್ಡಿಂಗ್ ಮಾಡಲಿದ್ದು, ಮತದಾನದ ನಂತರ ಸ್ಟ್ರಾಂಗ್ ರೂಮ್ ಗೆ ಮತ ಪೆಟ್ಟಿಗೆ ಶಿಫ್ಟ್ ಆಗಲಿದೆ.

ಚುನಾವಣೆಯಲ್ಲಿ ಕರ್ತವ್ಯ ನಿರ್ವಹಿಸುವ ಸಿಬ್ಬಂದಿಗಳಿಗೆ ಹಾಗೂ ಪೊಲೀಸರಿಗೆ ಬ್ಯಾಲೆಟ್ ಮತದಾನದ ವ್ಯವಸ್ಥೆಯಿದ್ದು, ಇವರು ಕೂಡ ನಾಳೆಯಿಂದ ಬ್ಯಾಲೇಟ್ ಪೇಪರ್ ಮೂಲಕ ಮತದಾನ ಮಾಡಬಹುದು. ಈ ಎಲ್ಲಾ ಮತಗಳನ್ನೂ ಮೇ 13 ರಂದು ಮತ ಎಣಿಕೆ ದಿನ ಓಪನ್ ಮಾಡಲಾಗುತ್ತದೆ.

## ಪ್ರಧಾನಿ ಮೋದಿ–ಸಿಎಂ ಬೊಮ್ಮಾಯಿಗೆ ಮಾಜಿ ಸಿಎಂ ಸಿದ್ದರಾಮಯ್ಯ ಪಂಥಾಹ್ವಾನ



ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಪ್ರತಿಪಕ್ಷ ನಾಯಕ ಸಿದ್ದರಾಮಯ್ಯ ಅವರು ಪಂಥಾಹ್ವಾನ ನೀಡಿದ್ದಾರೆ.

ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ಕಾಂಗ್ರೆಸ್ ಪಕ್ಷದ ಗ್ಯಾರಂಟಿಗಳ ಬಗ್ಗೆ ಕುಹಕವಾಡುವ ಬಿಜೆಪಿ ನಾಯಕ–ರಿಗೆ ನನ್ನದೊಂದು ನೇರ ಸವಾಲು. 2013ರ ಕಾಂಗ್ರೆಸ್ ಪ್ರಣಾಳಿಕೆ ಮತ್ತು 2018ರ ಬಿಜೆಪಿ ಪ್ರಣಾಳಿಕೆಗಳಲ್ಲಿ ನೀಡಲಾದ ಭರವಸೆಗಳು ಹಾಗೂ ಈಡೇರಿಸಲಾಗಿರುವ ಭರವಸೆಗಳ ಬಗ್ಗೆ ಬಹಿರಂಗವಾಗಿ ಚರ್ಚೆ ನಡೆಸೋಣ. ಧಮ್–ತಾಕತ್ ಇದ್ದ ಮುಖ್ಯಮಂತ್ರಿಗಳು, ಇಲ್ಲವೇ ಐವತ್ತಾರು ಇಂಚಿನ ಎದೆಯ ಪ್ರಧಾನಿಗಳು ಯಾರಾದರೂ ಬರಲಿ, ನಾನು ಚರ್ಚೆಗೆ ಸಿದ್ಧನಿದ್ದೇನೆ ಎಂದಿದ್ದಾರೆ. ನುಡಿದಂತೆ ನಡೆದಿರುವ ವಿಶ್ವಾಸ ನನ್ನದು, ಜನತಾ ಜನಾರ್ಧನರೇ ಇದಕ್ಕೆ ಸಾಕ್ಷಿ ಎಂದು ಟ್ವೀಟ್ ಮೂಲಕ ಸಿದ್ದರಾಮಯ್ಯ ಅವರು ಪಂಥಹ್ವಾನ ನೀಡಿದ್ದಾರೆ.

## ಕಾಂಗ್ರೆಸ್–ಬಿಜೆಪಿ ಕಾರ್ಯಕರ್ತರ ನಡುವೆ ಗಲಾಟೆ



ಮೈಸೂರು : ಚುನಾವಣಾ ಪ್ರಚಾರದ ವೇಳೆ ಕಲ್ಲು ತೂರಾಟ ನಡೆದಿರುವ ಘಟನೆ ಮಾಜಿ ಸಿಎಂ ಸ್ಪರ್ಧಿಸಿರುವ ವರುಣ ಕ್ಷೇತ್ರದ ಸಿದ್ದರಾಮನಹುಂಡಿಯಲ್ಲಿ ನಡೆದಿರುವ ಬಗ್ಗೆ ವರದಿಯಾಗಿದೆ.

ವರುಣಾದಲ್ಲಿ ಬಿಜೆಪಿ ಅಭ್ಯರ್ಥಿ ವಿ.ಸೋಮಣ್ಣ ಮತ್ತು ಸಂಸದ ಪ್ರತಾಪ್ ಸಿಂಹ ಅವರು ಚುನಾವಣಾ ಪ್ರಚಾರ ನಡೆಸುತ್ತಿದ್ದಾಗ ಕಾಂಗ್ರೆಸ್ (Congress) ಮತ್ತು ಬಿಜೆಪಿ (BJP) ಕಾರ್ಯಕರ್ತರ ನಡುವೆ ಗಲಾಟೆ ಉಂಟಾಗಿದ್ದು, ಈ ವೇಳೆ ಕಲ್ಲು ತೂರಾಟವಾಗಿದೆ.

ಮಾಜಿ ಸಿಎಂ ಸಿದ್ದರಾಮಯ್ಯ ಅಣ್ಣನ ಮನೆ ಮುಂದೆ ಪ್ರಚಾರ ಮಾಡುವಾಗ ಘಟನೆ ನಡೆದಿದ್ದು, ಗಲಾಟೆಯಲ್ಲಿ ಬಿಜೆಪಿ ಕಾರ್ಯಕರ್ತ ನಾಗೇಶ್ ಎಂಬಾತನ ಮೇಲೆ ಹಲ್ಲೆ ಮಾಡಿರುವ ಆರೋಪ ಕೇಳಿ ಬಂದಿದ್ದು, ಗಾಯಗೊಂಡ ನಾಗೇಶ್ ಖಾಸಗಿ ಆಸ್ಪತ್ರೆಗೆ ದಾಖಲಾಗಿದ್ದಾರೆ.

ಬಿಜೆಪಿ ಅಭ್ಯರ್ಥಿ ಸೋಮಣ್ಣ, ಸಂಸದ ಪ್ರತಾಪ್ ಸಿಂಹ ಪ್ರಚಾರ ರಥದಲ್ಲಿದ್ದು, ಸ್ವಲ್ಪದರಲ್ಲೇ ಪಾರಾಗಿದ್ದಾರೆ ಎಂದು ಹೇಳಲಾಗುತ್ತಿದೆ.

## ಪ್ರಧಾನ ಮಂತ್ರಿ ಕಾರ್ಯಕ್ರಮ: “ರೆಡ್ ಝೋನ್”/“ನೋ ಫ್ಲೈ ಝೋನ್” ಘೋಷಣೆ

ಬೆಳಗಾವಿ: ಪ್ರಧಾನ ಮಂತ್ರಿಗಳಾದ ನರೇಂದ್ರ ಮೋದಿ ಅವರು ಏಪ್ರಿಲ್.29 2023 ರಂದು ಬೆಳಗಾವಿ ಜಿಲ್ಲೆಯ ರಾಯಬಾಗ ತಾಲೂಕಿನ ಕೋಳಿಗುಡ್ಡ ಗ್ರಾಮದಲ್ಲಿನ ಸಾರ್ವಜನಿಕ ಬಹಿರಂಗ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಕಾರಣ ಕಾರ್ಯಕ್ರಮ ಸ್ಥಳದ ಸುತ್ತಮುತ್ತ 2 ಕಿಮೀ ವ್ಯಾಪ್ತಿಯಲ್ಲಿ ಮಾನವ ರಹಿತ ವಾಯು ವಾಹನ **(Unmanned Aerial Vehicle (UAV)/(Unmanned AircraftSystems(UAS)/ Drones/Paragliders** ಗಳ ಹಾರಾಟವನ್ನು/ಬಳಕೆಯನ್ನು ಕಡ್ಡಾಯವಾಗಿ ನಿಷೇಧಿಸಿ **“Red Zone”/“No Fly Zone”** ಅಂತಾ ಘೋಷಿಸಿ ಜಿಲ್ಲಾ ದಂಡಾ ಧಿಕಾರಿಗಳಾದ ನಿತೇಶ್.ಕೆ.ಪಾಟೀಲ ಅವರು ಆದೇಶಿಸಿ ದ್ದಾರೆ.

## ಮೇ 2ರಿಂದ 4 ರವರೆಗೆ ಅಂಚೆ ಮತಪತ್ರದ ಮೂಲಕ ಮತದಾನ ಮಾಡಲು ಅವಕಾಶ

ಬೆಳಗಾವಿ: ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023ರ ಹಿನ್ನೆಲೆಯಲ್ಲಿ ಅಗತ್ಯ ಸೇವೆಗಳು ಎಂದು ಗುರುತಿಸಲಾದ ವಿವಿಧ ಇಲಾಖೆಗಳಿಗೆ ಅಂಚೆ ಮತಪತ್ರದ ಮೂಲಕ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಅಗತ್ಯ ಸೇವೆಗಳ ಇಲಾಖೆಗಳಡಿ ಬರುವ ನಮೂನೆ–12ಡಿ ರಲ್ಲಿ ಕೋರಿಕೆ ಸಲ್ಲಿಸಿದ ಅಧಿಕಾರಿ/ಸಿಬ್ಬಂದಿಗಳು (AVES) ಪೋಸ್ಟಲ್ ವೋಟಿಂಗ್ ಸೆಂಟರ್ (PVC) ಗಳನ್ನು ಮೇ.2 ರಿಂದ ಮೇ.4 2023 ರವರೆಗೆ ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ತೆರೆಯಲಾಗಿದೆ.

ಅಗತ್ಯ ಸೇವೆಗಳು ಎಂದು ಗುರುತಿಸಲಾದ ವಿವಿಧ ಇಲಾಖೆಗಳು:

ಇಲೆಕ್ಟ್ರಿಸಿಟಿ ಇಲಾಖೆ, ಬಿಎಸ್ಎನ್ಎಲ್, ರೈಲ್ವೆ ಇಲಾಖೆ, ದೂರದರ್ಶನ, ಆಲ್ ಇಂಡಿಯಾ ರೆಡಿಯೋ, ಆರೋಗ್ಯ ಇಲಾಖೆ, ಎವಿಯೆಷನ್, ಸಾರಿಗೆ ಸಂಸ್ಥೆ, ಫೈರ್ ಸರ್ವಿಸಿಸ್, Media Persons authorized bb ECI for pollday Coverage, ಟ್ರಾಫಿಕ್ ಪೋಲಿಸ್ ಹಾಗೂ ಅಂಬುಲೆನ್ಸ್ ಸೇವೆಗಳು.

**ಪೋಸ್ಟಲ್ ವೋಟಿಂಗ್ ಸೆಂಟರ್ (PVC) ಗಳ ವಿಳಾಸ:**

01 – ನಿಪ್ಪಾಣಿ: ತಹಶೀಲ್ದಾರ ಕಚೇರಿ ಐಬಿ ನಿಪ್ಪಾಣಿ

02–ಚಿಕ್ಕೋಡಿ–ಸದಲಗಾ: ಕೊಠಡಿ ನಂ:7 (ನೆಲ ಮಹಡಿ) ತಹಶೀಲ್ದಾರ ಕಚೇರಿ ಚಿಕ್ಕೋಡಿ

03– ಅಥಣಿ: ತಹಶೀಲ್ದಾರ ಕಚೇರಿ ಅಥಣಿ

04–ಕಾಗವಾಡ: ಚುನಾವಣಾಧಿಕಾರಿಗಳ ಕಚೇರಿ ಶಿವಾನಂದ ಕಾಲೇಜ್, ಕಾಗವಾಡ

05–ಕುಡಚಿ: ಚುನಾವಣಾಧಿಕಾರಿಗಳ ಕಚೇರಿ 05–ಕುಡಚಿ ವಿಧಾನಸಭೆ ಕ್ಷೇತ್ರ, ತಹಶೀಲ್ದಾರ ಕಾರ್ಯಾಲಯ ರಾಯಬಾಗ

06–ರಾಯಬಾಗ: ಚುನಾವಣಾಧಿಕಾರಿಗಳ ಕಚೇರಿ 06–ರಾಯಬಾಗ ವಿಧಾನಸಭೆ ಕ್ಷೇತ್ರ, ತಹಶೀಲ್ದಾರ ಕಾರ್ಯಾಲಯ ರಾಯಬಾಗ

07–ಹುಕ್ಕೇರಿ: ತಹಶೀಲ್ದಾರ ಕಚೇರಿ ಹುಕ್ಕೇರಿ

08–ಅರಭಾಂವಿ: ತಹಶೀಲ್ದಾರ ಕಚೇರಿ, ಮೂಡಲಗಿ

09–ಗೋಕಾಕ: ತಾಲೂಕಾ ಆಡಳಿತ ಸೌಧ ರೂಮ್ ನಂ:23 ತಹಶೀಲ್ದಾರ ಕಚೇರಿ ಗೋಕಾಕ

10–ಯಮಕನಮರಡಿ: ಸಹಾಯಕ ನಿರ್ದೇಶಕರು ಸಾಮಾಜಿಕ ಕಲ್ಯಾಣ ಕಚೇರಿ ಹೊಸ ಕಟ್ಟಡ ನೆಲ ಮಹಡಿ ಹುಕ್ಕೇರಿ

11–ಬೆಳಗಾವಿ ಉತ್ತರ: ಚುನಾವಣಾಧಿಕಾರಿಗಳ ಕಚೇರಿ, 11–ಬೆಳಗಾವಿ ಉತ್ತರ ವಿಧಾನಸಭೆ ಕ್ಷೇತ್ರ, ಮಹಾನಗರ ಪಾಲಿಕೆ ಕಚೇರಿ ಸುಭಾಷ ನಗರ ಬೆಳಗಾವಿ

12–ಬೆಳಗಾವಿ ದಕ್ಷಿಣ: ಚುನಾವಣಾಧಿಕಾರಿಗಳ ಕಚೇರಿ, 11–ಬೆಳಗಾವಿ ದಕ್ಷಿಣ ವಿಧಾನಸಭೆ ಕ್ಷೇತ್ರ, ಮಹಾನಗರ ಪಾಲಿಕೆ ಕಚೇರಿ ಸುಭಾಷ ನಗರ ಬೆಳಗಾವಿ

13–ಬೆಳಗಾವಿ ಗ್ರಾಮೀಣ: ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ, ಕಂಗ್ರಾಳಿ ಕೆ.ಎಚ್

14–ಖಾನಾಪೂರ: ತಹಶೀಲ್ದಾರ ಕಚೇರಿ, ಖಾನಾಪೂರ

15–ಕಿತ್ತೂರ: ರೂಮ್ ನಂ:14 ತಹಶೀಲ್ದಾರ ಕಚೇರಿ ಕಿತ್ತೂರ

16– ಬೈಲಹೊಂಗಲ: ತಹಶೀಲ್ದಾರ ಕಚೇರಿ, ಬೈಲಹೊಂಗಲ

17–ಸವದತ್ತಿ–ಯಲ್ಲಮ್ಮಾ: ಸರ್ವೇ ಸೆಕ್ಷನ್ ತಹಶೀಲ್ದಾರ ಕಚೇರಿ, ಸವದತ್ತಿ

18–ರಾಮದುರ್ಗ : ರೂಮ್ ನಂ.06 ತಹಶೀಲ್ದಾರ ಕಚೇರಿ, ರಾಮದುರ್ಗ

ಮೇಲೆ ವಿವರಿಸಿದ ಇಲಾಖೆಗಳಡಿ ಬರುವ ನಮೂನೆ–12ಡಿ ರಲ್ಲಿ ಕೋರಿಕೆ ಸಲ್ಲಿಸಿದ ಅಧಿಕಾರಿ/ ಸಿಬ್ಬಂದಿಗಳು ಪೋಸ್ಟಲ್ ವೋಟಿಂಗ್ ಸೆಂಟರ್ (PVC)ಗಳಿಗೆ ಭೇಟಿ ನೀಡಿ ಮತದಾನ ಮಾಡಬಹುದಾಗಿದೆ. ಮತದಾನ ಮಾಡಲು ತೆರಳಿದ ದಿನಕ್ಕೆ ಮಾತ್ರ ವೇತನ ಸಹಿತ ರಜೆಯನ್ನು ನೀಡಲಾಗುವುದು. ಕಾರಣ ಅಗತ್ಯ ಸೇವೆಗಳ ಇಲಾಖೆಗಳಡಿ ಬರುವ ಸಂಬಂಧಿಸಿದ ಅಧಿಕಾರಿ/ ಸಿಬ್ಬಂದಿಗಳು ಈ ಸಂದರ್ಭವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಜಿಲ್ಲಾ ಚುನಾವಣಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಿಲಿಟರಿ ಬಾಲಕರ ವಸತಿ ನಿಲಯ: ಪ್ರವೇಶಾತಿಗಾಗಿ ಅರ್ಜಿ ಆಹ್ವಾನ

ಬೆಳಗಾವಿ: ಬೆಳಗಾವಿ ನಗರದ ರೈಲು ನಿಲ್ದಾಣದ ಎದುರಿಗಿರುವ ಮಿಲಿಟರಿ ಬಾಲಕರ ವಸತಿ ನಿಲಯಕ್ಕೆ ಸನ್ 2023–2024ನೇ ಶೈಕ್ಷಣಿಕ ವರ್ಷಕ್ಕೆ ಯುದ್ಧ ಸಂತ್ರಸ್ಥರು ಮತ್ತು ಮಾಜಿ ಸೈನಿಕರ ಮಕ್ಕಳಿಗೆ ಪ್ರವೇಶಕ್ಕಾಗಿ ಅರ್ಜಿಗಳನ್ನು ಅಹ್ವಾನಿಸಲಾಗಿದೆ.

ವಿದ್ಯಾರ್ಥಿಗಳು ಬೆಳಗಾವಿ ನಗರದ ಶೈಕ್ಷಣಿಕ ಸಂಸ್ಥೆಗಳಲ್ಲಿ 5ನೇ ತರಗತಿಯಿಂದ ಪಿಯುಸಿ, ಡಿಪ್ಲೋಮಾ ಹಾಗೂ ಐಟಿಐದಲ್ಲಿ ವ್ಯಾಸಾಂಗಕ್ಕಾಗಿ ಪ್ರವೇಶವನ್ನು ಪಡೆದಿರಬೇಕು. ನಿಲಯದಲ್ಲಿ ಉಪಹಾರ, ಊಟ ಹಾಗೂ ವಸತಿ ಉಚಿತವಾಗಿರುತ್ತದೆ.

ಆಸಕ್ತ ಮಾಜಿ ಸೈನಿಕರು ಹಾಗೂ ಯುದ್ಧ ಸಂತ್ರಸ್ಥರು ತಮ್ಮ ಮಕ್ಕಳಿಗೆ ನಿಲಯದ ಪ್ರವೇಶಕ್ಕೆ ಅರ್ಜಿಯನ್ನು ಜಂಟಿ ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುರ್ನವಸತಿ ಇಲಾಖೆ, ಬೆಳಗಾವಿ ಇವರ ಕಾರ್ಯಾಲಯದಿಂದ ಉಚಿತವಾಗಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೋಬೈಲ ಸಂಖ್ಯೆ 9449880818 ಗೆ ಸಂಪರ್ಕಿಸಬಹುದು ಎಂದು ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಬಿ.ಎಲ್. ಸಂತೋಷ್ ಬಹಿರಂಗವಾಗಿಯೇ ಯುದ್ಧಕ್ಕೆ ಬರಲಿ: ಶೆಟ್ಟರ್ ಸವಾಲು

ಹುಬ್ಬಳ್ಳಿ: ಲಿಂಗಾಯತ ನಾಯಕರನ್ನು ರಾಜಕೀಯವಾಗಿ ಮುಗಿಸಲು ಲಿಂಗಾಯತ ನಾಯಕರನ್ನೇ ಮುಂದೆ ಬಿಡಲಾಗುತ್ತಿದೆ ಎಂಬ ಗಂಭೀರ ಆರೋಪ ಬಿಜೆಪಿ ವಿರುದ್ಧ ಕೇಳಿ ಬಂದಿದೆ. ಜಗದೀಶ್ ಶೆಟ್ಟರ್ ಅನ್ನು ಸೋಲಿಸುವ ಜವಾಬ್ದಾರಿ ನನ್ನದು ಎಂದು ಹಿರಿಯ ಲಿಂಗಾಯತ ನಾಯಕ ಬಿಎಸ್ ಯಡಿಯೂರಪ್ಪ ಬಹಿರಂಗವಾಗಿ ಘೋಷಿಸಿದ ಬೆನ್ನಲ್ಲೇ ಬಿಜೆಪಿಯ ಒಡೆದು ಆಳುವ ನೀತಿಯ ಬಗ್ಗೆ ಶೆಟ್ಟರ್ ಮಾತನಾಡಿದ್ದಾರೆ.

ತನಗೆ ಟಿಕೆಟ್ ತಪ್ಪಲು ಬಿಎಲ್ ಸಂತೋಷ್ ಕಾರಣ ಎಂದಿದ್ದ ಮಾಜಿ ಸಿಎಂ ಜಗದೀಶ್ ಶೆಟ್ಟರ್ ಮತ್ತೆ ಸಂತೋಷ್ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ. ಲಿಂಗಾಯತ ಸಮುದಾಯವನ್ನು ಒಡೆದು ಆಳಲು ಲಿಂಗಾಯತ ನಾಯಕರ ವಿರುದ್ಧ ಲಿಂಗಾಯತ ನಾಯಕರಲ್ಲೇ ಹೇಳಿಕೆ ನೀಡಿಸಲಾಗುತ್ತಿದೆ ಎಂದು ಶೆಟ್ಟರ್ ಹೇಳಿದ್ದಾರೆ.

ಹುಬ್ಬಳ್ಳಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಶೆಟ್ಟರ್, “ಯಡಿಯೂರಪ್ಪರ ಮೇಲೆ ನನ್ನ ವಿರುದ್ಧ ಮಾತಾಡುವಂತೆ ಒತ್ತಡ ಹೇರಲಾಗಿದೆ. ಒಬ್ಬ ಲಿಂಗಾಯತ ನಾಯಕನನ್ನು ಮುಗಿಸಲು ಮತ್ತೊಬ್ಬ ಲಿಂಗಾಯತನ ಹೆಗಲ ಮೇಲೆ ಬಂದೂಕು ಇಟ್ಟು ಹೊಡೆಯುವ ಕೆಲಸದಲ್ಲಿ ಬಿಜೆಪಿ ತೊಡಗಿಸಿದೆ. ಲಿಂಗಾಯತರನ್ನು ಒಡೆದು ಆಳುವ ನೀತಿಯನ್ನು ಬಿಜೆಪಿ ಅನುಸ–ರಿಸುತ್ತಿದೆ” ಎಂದು ಶೆಟ್ಟರ್ ಹೇಳಿದ್ದಾರೆ.

ಕೊನೆ ಕ್ಷಣದಲ್ಲಿ ಟಿಕೆಟ್ ವಂಚಿತರಾಗಿದ್ದ ಜಗದೀಶ್ ಶೆಟ್ಟರ್ ಅಸಮಾಧಾನ ಹೊರ ಹಾಕಿ ಕಾಂಗ್ರೆಸ್ ಪಕ್ಷಕ್ಕೆ ಸೇ–ರಿದ್ದರು. ಅಲ್ಲದೆ, ತನಗೆ ಟಿಕೆಟ್ ತಪ್ಪಲು ಬಿಎಲ್ ಸಂತೋಷ್ ಕಾರಣ ಎಂದು ನೇರ ಆರೋಪ ಮಾಡಿದ್ದರು. ಆದ–’ರೆ, ಇದ್ಯಾವುದಕ್ಕೂ ಬಿಎಲ್ ಸಂತೋಷ್ ಪ್ರತಿಕ್ರಿಯೆ ನೀಡದೆ ಮೌನವಾಗಿದ್ದಾರೆ.



ಈ ಮೌನವನ್ನು ಪ್ರಶ್ನಿಸಿರುವ ಶೆಟ್ಟರ್, ನನ್ನ ಆರೋಪಗಳಿಗೆ ಸಂತೋಷ್ ಇದುವರೆಗೂ ಉತ್ತರಿಸಿಲ್ಲ, ಬದಲಾಗಿ ಬೇರೆಯವರ ಮೂಲಕ ನನ್ನ ವಿರುದ್ಧ ಟೀಕೆ ಮಾಡಿಸುತ್ತಿದ್ದಾರೆ. ಯುದ್ಧ ಮಾಡುವುದಿದ್ದರೆ ಬಹಿರಂಗವಾಗಿ ಯುದ್ಧ ಮಾಡಲಿ ಎಂದು ಸವಾಲು ಹಾಕಿದ್ದರು.

ಬೆಳಗಾವಿಯ ಅಥಣಿಯಲ್ಲಿ ಪ್ರಚಾರ ಮಾಡುವ ಸಂದರ್ಭದಲ್ಲಿ ಮಾಜಿ ಸಿಎಂ ಬಿಎಸ್ ಯಡಿಯೂರಪ್ಪ ಜಗದೀಶ ಶೆಟ್ಟರ್ ಹಾಗೂ ಲಕ್ಷ್ಮಣ್ ಸವದಿ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಹುಬ್ಬಳ್ಳಿಯಲ್ಲಿ ಶೆಟ್ಟರ್ ರನ್ನು ಸೋಲಿಸುವ ಜವಾಬ್ದಾರಿ ನಾನು ತೆಗೆದುಕೊಳ್ಳುತ್ತೇನೆ, ಅಥಣಿಯಲ್ಲಿ ಸವದಿಯನ್ನು ಸೋಲಿಸುವ ಹೊಣೆಯನ್ನು ನೀವು ತೆಗೆದುಕೊಳ್ಳಿ ಎಂದು ಕ್ಷೇತ್ರದ ಮತದಾರರಿಗೆ ಬಿಎಸ್‌ವೈ ಕರೆ ಕೊಟ್ಟಿದ್ದರು.

ಇದರ ಬೆನ್ನಲ್ಲೇ ಶೆಟ್ಟರ್, “ನಾನು ಅಂತಹ ಅಪರಾಧ ಏನು ಮಾಡಿದ್ದೇನೆ, ಹಲವಾರು ಮಂದಿ ಪಕ್ಷ ತೊರೆದಿದ್ದಾರೆ. ಆದರೆ, ನನ್ನನ್ನು ಸೋಲಿಸಲೇಬೇಕೆಂದು ಲಿಂಗಾಯತ ನಾಯಕರನ್ನು ಮುಂದೆ ಬಿಡಲಾಗುತ್ತಿದೆ. ಅಮಿತ್ ಶಾ, ಜೆಪಿ ನಡ್ಡಾ, ಸ್ಮೃತಿ ಇರಾನಿಯಾದಿ ನಾಯಕರು ನನ್ನನ್ನು ಸೋಲಿಸಬೇಕೆಂದು ಕರೆ ನೀಡುತ್ತಿದ್ದಾರೆ’ ಎಂದು ಹೇಳಿದ್ದರು.

ಇತ್ತೀಚೆಗೆ ಬೆಳಗಾವಿಯಲ್ಲಿ ಲಿಂಗಾಯತ ಮುಖಂಡರೊಂದಿಗೆ ಅಮಿತ್ ಶಾ ನಡೆಸಿದ ಸಭೆಯಲ್ಲಿ ಲಕ್ಷ್ಮಣ್ ಸವದಿ ಹಾಗೂ ಜಗದೀಶ್ ಶೆಟ್ಟರ್ ನಿರ್ಗಮನದಿಂದಾಗಿ ಲಿಂಗಾಯತರಿಗೆ ಪಕ್ಷದ ಬಗ್ಗೆ ಭರವಸೆ ಕಳೆದುಕೊಳ್ಳದಂತೆ ಯೋಜನೆ ರೂಪಿಸಲು ನಿರ್ದೇಶನ ನೀಡಲಾಗಿತ್ತು ಎಂದು ಪಕ್ಷದ ಮೂಲಗಳು ಹೇಳಿದ್ದವು.

ಲಿಂಗಾಯತರಿಗೆ ಪಕ್ಷ ದ್ರೋಹ ಮಾಡಿಲ್ಲ ಎನ್ನುವದನ್ನು ಸಮುದಾಯದ ಮತದಾರರಿಗೆ ಮನದಟ್ಟು ಮಾಡಿಕೊಡಬೇಕು, ಶೆಟ್ಟರ್ ರನ್ನು ಸೋಲಿಸಿ, ಪಕ್ಷ ತೊರೆಯುವವ–ರಿಗೆ ಸ್ಪಷ್ಟ ಸಂದೇಶ ನೀಡಬೇಕೆಂದು ಹೈಕಮಾಂಡಿನಿಂದಲೇ ಆದೇಶ ಆಗಿದೆ ಎಂದು ಹೇಳಲಾಗಿದೆ. ಈ ಹಿನ್ನೆಲೆಯಲ್ಲಿ ಲಿಂಗಾಯತರನ್ನು ಒಡೆದು ಆಳುವ ಬಗ್ಗೆ ಬಿಜೆಪಿ ವಿರುದ್ಧ ಶೆಟ್ಟರ್ ಮಾಡಿರುವ ಆರೋಪಗಳು ರಾಜ್ಯ ರಾಜಕಾರಣದಲ್ಲಿ ಸಾಕಷ್ಟು ಚರ್ಚೆಗೆ ಕಾರಣವಾಗಿದೆ.

## ಬಿಜೆಪಿ ಕಾರ್ಯಕರ್ತರ ಜೊತೆ ಸಂವಾದ



ಹುಕ್ಕೇರಿ: ಪ್ರದಾನ ಮಂತ್ರಿ ನರೇಂದ್ರ ಮೋದಿ ಅವರು ವರ್ಚುವಲ್ ಮಿಟಿಂಗ್ ಮುಖಾಂತರ ಬಿಜೆಪಿ ಕಾರ್ಯಕರ್ತರ ಜೊತೆ ಸಂವಾದ ನಡೆಸಿದರು.

ತಾಲೂಕಿನ ಬೆಲ್ಲದ ಬಾಗೇವಾಡಿ ಜಿಲ್ಲಾ ಪಂಚಾಯತಿಯ ಮಹಾಶಕ್ತಿ ಕೇಂದ್ರದಲ್ಲಿ ಮಾತನಾಡಿದರು. ಕಾರ್ಯಕರ್ತರ, ಸಲಹೆ ಗೌರವಿಸುದು, ಪಕ್ಷದ ಸಾದನೆ ಜನರಿಗೆ ತಿಳಿಸುವದು ಕರ್ನಾಟಕದಲ್ಲಿ ಮತ್ತೆ ಬಿಜೆಪಿ ಸರಕಾರ ರಚಿಸುವ ಭರವಸೆಯಿದೆ. ಇನ್ನಿತರ ವಿಷಯಗಳ ಬಗ್ಗೆ ಚರ್ಚಿಸಿದರು.

ಈ ಸಭೆಯಲ್ಲಿ ಚಿಕ್ಕೋಡಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಮೇಶ ಕತ್ತಿ, ಹುಕ್ಕೇರಿ ವಿಧಾನ ಸಭಾ ಕ್ಷೇತ್ರದ ಅಭ್ಯರ್ಥಿ ನಿಖಿಲ್ ಕತ್ತಿ ಮಂಡಳ ಅಧ್ಯಕ್ಷ ರಾಚಯ್ಯ ಹಿರೇಮಠ. ರೈತ ಮೋರ್ಚಾ ಜಿಲ್ಲಾ ಅಧ್ಯಕ್ಷ ಸತ್ಯಪ್ಪ ನಾಯಿಕ ಸೇರಿದಂತೆ ಪಕ್ಷದ ವಿವಿಧ ಘಟಕಗಳ ಪದಾಧಿಕಾರಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

## ಮಾಜಿ ಡಿಸಿಎಂ, ಕಾಂಗ್ರೆಸ್ ನಾಯಕ ಡಾ.ಜಿ.ಪರಮೇಶ್ವರ್ ಮೇಲೆ ಕಲ್ಲು ತೂರಾಟ

ತುಮಕೂರು: ಮಾಜಿ ಉಪಮುಖ್ಯಮಂತ್ರಿ, ಕಾಂಗ್ರೆಸ್ ನಾಯಕ ಡಾ.ಜಿ.ಪರಮೇಶ್ವರ್ ಅವರ ಮೇಲೆ ಕಲ್ಲು ತೂರಾಟ ಮಾಡಿರುವ ಘಟನೆ ಕೊರಟಗೆರೆ ಕ್ಷೇತ್ರದ ಭೈರೇನಹಳ್ಳಿಯಲ್ಲಿ ನಡೆದಿದೆ.

ಚುನಾವಣಾ ಪ್ರಚಾರಕ್ಕಾಗಿ ಅವರು ಭೈರನೇಹಳ್ಳಿಗೆ ಹೋಗಿದ್ದರು. ಅವರಿಗೆ ಅಭಿಮಾನಿಗಳು ಹೂ ಹಾಕುವ ಸಂದರ್ಭದಲ್ಲಿ ದುಷ್ಕರ್ಮಿಗಳು ಕಲ್ಲು ತೂರಾಟ ಮಾಡಿದ್ದಾರೆ. ಈ ವೇಳೆ ಪರಮೇಶ್ವರ ಅವರ ತಲೆಗೆ ಪೆಟ್ಟಾಗಿದೆ.

ತಕ್ಷಣವೇ ಅವರನ್ನು ಅಕ್ಕಿರಾಂಪುರದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ದು ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಬಳಿಕ ತುಮಕೂರಿನ ಸಿದ್ದಾರ್ಥ ವೈದ್ಯಕೀಯ ಕಾಲೇಜಿಗೆ ಸ್ಥಳಾಂತರಿಸಲಾಗಿದೆ ಎಂದು ತಿಳಿದುಬಂದಿದೆ.

ಪ್ರಚಾರ ವೇಳೆ ಗುಂಪಿನಲ್ಲಿದ್ದ ದುಷ್ಕರ್ಮಿಯಿಂದ ಡಾ ಜಿ ಪರಮೇಶ್ವರ್ ಮೇಲೆ ಕಲ್ಲೆಸೆತ: ಆಸ್ಪತ್ರೆಗೆ ದಾಖಲು



ಡಾ.ಜಿ.ಪರಮೇಶ್ವರ್ ಅವರು ಗಾಯಗೊಂಡಿರುವುದು

“ಪರಮೇಶ್ವರ್ ಅವರು ಚೇತರಿಸಿಕೊಳ್ಳುತ್ತಿದ್ದು, ಅಭಿಮಾನಿಗಳು ಶಾಂತಿಯಿಂದ ಇರಬೇಕು” ಎಂದು ಸ್ಥಳೀಯ ಕಾಂಗ್ರೆಸ್ ಮುಖಂಡರು ಮನವಿ ಮಾಡಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಡಾ. ಜಿ ಪರಮೇಶ್ವರ್ ಅವರು ತಮ್ಮ ಸಾವಿರಾರು ಬೆಂಬಲಿಗರೊಂದಿಗೆ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿಯೂ ಕಲ್ಲು ತೂರಾಟ ಮಾಡಲಾಗಿತ್ತು. ಕಲ್ಲು ಎಸೆತ ಪ್ರಕರಣಕ್ಕೆ ಸಂಬಂಧಿಸಿದ ಆರೋಪಿಯನ್ನು ಕೊರಟಗೆರೆ ಪೊಲೀಸರು ಬಂಧಿಸಿದ್ದರು.

ಕೊರಟಗೆರೆ ತಾಲೂಕಿನ ರೆಡ್ಡಿಹಳ್ಳಿ ವೆಂಕಟಾಪುರ ಗ್ರಾಮದ ರಂಗಧಾಮಯ್ಯ ಬಂಧಿತ ಆರೋಪಿಯಾಗಿದ್ದು, ಸದ್ಯ ಆರೋಪಿಯನ್ನು ಪೊಲೀಸರು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದರು.

ಘಟನೆಯಲ್ಲಿ ಮಹಿಳಾ ಪೊಲೀಸ್ ಪೇದೆಯೊಬ್ಬರು ಗಾಯ ಗೊಂಡಿದ್ದರು. ಆರೋಪಿಯು ಘಟನೆ ನಂತರ ಕಳೆದ ಮೂರು–ನಾಲ್ಕು ದಿನದಿಂದ ತಲೆಮರೆಸಿಕೊಂಡಿದ್ದ ಎಂದು ಪೊಲೀಸರು ತಿಳಿಸಿದ್ದರು.

ಈಗ ಮತ್ತೆ ಪರಮೇಶ್ವರ್ ಅವರ ಮೇಲೆ ಕಲ್ಲು ತೂರಾಟ ನಡೆದಿದೆ. ಚುನಾವಣೆ ಸಂದರ್ಭದಲ್ಲಿ ಅವರ ಮೇಲೆ ಆಗಿರುವ ಎರಡನೇ ದಾಳಿ ಇದಾಗಿದೆ.

ಡಾ. ಜಿ.ಪರಮೇಶ್ವರ್ 8 ವರ್ಷಗಳ ಕಾಲ ಕೆಪಿಸಿಸಿ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಜೆಡಿಎಸ್– ಕಾಂಗ್ರೆಸ್ ಮೈತ್ರಿ ಸರ್ಕಾರದ ವೇಳೆಯಲ್ಲಿ ಉಪ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದಾರೆ.

# ದ್ವೇಷ ರಾಜಕಾರಣ ಮಾಡದ ಕಿರಣ್ ಬೆಂಬಲಿಸಿ

ಹುಳಿಯಾರು: ನಾನು ಕಂಡ ರೀತಿಯಲ್ಲಿ ಅತ್ಯಂತ ಚಟುವಟಿ–ಕೆಯಿಂದ, ಸದಾ ಚಲನಶೀಲ ವ್ಯಕ್ತಿತ್ವ, ಕ್ಷೇತ್ರದ ಅಭಿವೃದ್ಧಿಗಾಗಿ ತುಡಿಯುವ, ದ್ವೇಷ ರಾಜ–ಕಾರಣ ಮಾಡದ ವ್ಯಕ್ತಿ ಕಾಂಗ್ರೆಸ್ ಅಭ್ಯರ್ಥಿ ಕೆ.ಎಸ್.ಕಿರಣ್‌ಕುಮಾರ್. ಹಾಗಾಗಿ ಈ ಚುನಾವಣೆಯಲ್ಲಿ ಮತದಾರರು ಕಿರಣ್ ಅವರನ್ನು ಬೆಂಬಲಿಸುವಂತೆ ಜಿಪಂ ಮಾಜಿ ಸದಸ್ಯ ಹಾಗೂ ಜಿಲಾ ಕಾಂಗ್ರೆಸ್ ಉಪಾಧ್ಯಕ್ಷ ಜಿ.ರಘುನಾಥ್ ತಿಳಿಸಿದರು.



ಹಂದನಕೆರೆ ಹೋಬಳಿಯ ಕಿಡುಕನಹಳ್ಳಿ, ಎಣ್ಣೇಗೆರೆ, ದೊಡ್ಡ ಹುಲೇನಹಳ್ಳಿ, ನಡುವನಹಳ್ಳಿಗಳಲ್ಲಿ ಕೆ.ಎಸ್.ಕಿರಣ್ ಕುಮಾರ್ ಪರ ಮತಯಾಚನೆ ಮಾಡಿದ ಅವರು ಕಾಂಗ್ರೆಸ್ ಜನರ ಬದುಕು ಕಟ್ಟುವ ರಾಜಕಾರಣ ಮಾಡುತ್ತದೆ, ಬಿಜೆಪಿ ಭಾವನಾತ್ಮಕ ವಿಚಾರವಿಟ್ಟುಕೊಂಡು ರಾಜ–ಕಾರಣ ಮಾಡುತ್ತದೆ.

ಕಾಂಗ್ರೆಸ್ ಅಧಿಕಾರದಲ್ಲಿದ್ದಾಗಲೆಲ್ಲಾ ಜನರ ಬದುಕು ಸುಧಾರಿಸುವ ಯೋಜನೆ ತಂದಿದೆ. ಸಿದ್ದರಾಮಯ್ಯ ಅಧಿಕಾರದಲ್ಲಿದ್ದಾಗ ಜನರ ಬದುಕು ಕಟ್ಟುವ ಯೋಜನೆ ಜಾರಿಗೆ ತಂದಿದ್ದರು ಎಂದು ತಿಳಿಸಿದರು.

ಮಾಜಿ ಶಾಸಕ ಬಿ.ಲಕ್ಕಪ್ಪ ಅವರು ಮಾತನಾಡಿ ಲಂಬಾಣಿ ಸಮುದಾಯ ಪರಿಶಿಷ್ಟ ಜಾತಿಗೆ ಸೇರಿಸಿದ್ದು ಇಂದಿರಾಗಾಂಧಿ, ಸಂತ ಸೇವಾಲಾಲರ ಜಯಂತಿ ಆಚರಣೆಗೆ ತಂದಿದ್ದು ಸಿದ್ದರಾಮಯ್ಯ, ದೇವರಾಜ ಅರಸ್, ಕೆ.ಟಿ. ರಾಠೋಡ್, ಎಲ್.ಆರ್. ನಾಯಕ ಅವರಿಂದ ಸಮುದಾಯ ಸಮಗ್ರ ಅಭಿವೃದ್ಧಿ ಕಾಣಲು ಸಾಧ್ಯವಾಗಿದೆ ಎಂದರು. ಕಾಂಗ್ರೆಸ್ ಮೊದಲಿನಿಂದಲೂ ಬಂಜಾರಾ ಸಮಾಜದ ಹಿತ ಕಾಪಾಡುತ್ತಲೇ ಬಂದಿದೆ. ಆದ–’ರೆ, ಬಿಜೆಪಿ ಮಾತ್ರ ಈಗ ಒಳ ಮೀಸಲಾತಿ ನೆವದಲ್ಲಿ ನಿಮ್ಮನ್ನು ಸದಾಶಿವ ಆಯೋಗದಿಂದಲೇ ಕೈಬಿಡುವ ಹುನ್ನಾರ ನಡೆಸಿದೆ. ಇದನ್ನು ನೀವು ಅರ್ಥ ಮಾಡಿಕೊಳ್ಳಿ ಎಂದು ಎಚ್ಚ–ರಿಸಿದರು.

ಸಾದ್ರಳ್ಳಿ ಮಲ್ಲಿಕಾರ್ಜುನ್, ಆಲದಕಟ್ಟೆಕರಿಯಾನಾಯ್ಕ, ನರಸಿಂಹನಾಯ್ಕ, ಜಗದೀಶ್, ಸೇಟಪ್ಪ, ರಂಗನಾಥ್,ಇದ್ದರು.

## ಲಿಂಗಾಯತ ನಾಯಕರಿಗೆ ಬಿ.ಎಲ್. ಸಂತೋಷ ಅವಮಾನ: ಸಿದ್ದರಾಮಯ್ಯ



ರಾಯಚೂರು: ಬಿ.ಎಲ್. ಸಂತೋಷ ಲಿಂಗಾಯತ ನಾಯಕರಿಗೆ ಅವಮಾನ ಮಾಡಿದ್ದಾರೆ. ಯಡಿಯೂರಪ್ಪ ಸಿಎಂ ಇದ್ದಾಗ ಕಣ್ಣೀರು ಹಾಕಿಸಿದರು. ಜಗದೀಶ ಶೆಟ್ಟರ್‌ಗೆ ಟಿಕೆಟ್ ನೀಡದೆ ಪಕ್ಷದಿಂದ ತೆಗೆದು ಹಾಕಿದರು. ಲಕ್ಷ್ಮಣ್ ಸವದಿಗೂ ಟಿಕೆಟ್ ಕೊಡಲಿಲ್ಲ. ಹಾಗಾದರೆ ಲಿಂಗಾಯತರಿಗೆ ನಿಜವಾಗಿಯೂ ಅವಮಾನ ಮಾಡಿದವರು ಯಾರು ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಪ್ರಶ್ನಿಸಿದರು.

ಮಾನ್ವಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, ಮೊಮ್ಮಗ ಧವನ್ ರಾಕೇಶ್ ಇನ್ನೂ ವಿದ್ಯಾರ್ಥಿ. ರಾಜಕೀಯಯಕ್ಕೆ ಬಂದಿಲ್ಲ. ಪಿಯುಸಿ ಓದುತ್ತಿದ್ದಾನೆ. ವರುಣಾ ಕ್ಷೇತ್ರದಲ್ಲಿ ನಮ್ಮ ಸೊಸೆ ಚುನಾವಣೆ ಪ್ರಚಾರ ಮಾಡುತ್ತಿದ್ದಾರೆ. ಅದರಲ್ಲೇನು ತಪ್ಪು? ಸೋಮಣ್ಣ ಜೆಡಿಎಸ್ ಅಭ್ಯರ್ಥಿಗೆ ಚಾಮರಾಜನಗರದಲ್ಲಿ ಆಮಿಷ ಒಡ್ಡಿದ್ದಾರೆ. ಮುಂದೆ ನಮ್ಮ ಕ್ಷೇತ್ರದಲ್ಲೂ ಆಮಿಷ ಒಡ್ಡುತ್ತಾರೆ. ಬಿಜೆಪಿಯವರಿಗೆ ಈಗಾಗಲೇ ನಡುಕ ಶುರುವಾಗಿದೆ. ಕಾಂಗ್ರೆಸ್ ಗೆಲ್ಲುತ್ತದೆ ಎಂದು ಅವರಿಗೂ ಗೊತ್ತಾಗಿದೆ. ಇಡೀ ರಾಜ್ಯದ ಜನರಿಗೂ ಸತ್ಯ ಗೊತ್ತಾಗಿದೆ ಎಂದರು.

## ಸಿಎಂ ಬೊಮ್ಮಾಯಿ ಮನೆ ಮುಂದಿನ ರಸ್ತೆಯಲ್ಲೇ 10 ಲಕ್ಷ ಹಣ ಪತ್ತೆ



ಬೆಂಗಳೂರು : ರಾಜ್ಯಾದ್ಯಂತ ಚುನಾವಣಾ ಅಧಿಕಾ–ರಿಗಳ ಕಾರ್ಯಾಚರಣೆ ಮುಂದು ವರಿದಿದ್ದು, ಸಿಎಂ ಬಸವರಾಜ ಬೊಮ್ಮಾಯಿ ಅವರ ಮನೆಯ ಮುಂದಿನ ರಸ್ತೆಯಲ್ಲೇ 10 ಲಕ್ಷ ನಗದು ಹಣ ಪತ್ತೆಯಾಗಿದೆ. ಗುರುವಾರ ತಡರಾತ್ರಿ ಬೆಂಗಳೂ–ರಿನ ಆರ್ಟಿ ನಗರದ ಸಿಎಂ ಬೊಮ್ಮಾಯಿಯವರ ಮನೆ ಮುಂದಿನ ರಸ್ತೆಯ ಚೆಕ್‌ಪೋಸ್ಟ್‌ನಲ್ಲಿ ವಾಹನಗಳ ತಪಾಸಣೆ ನಡೆಸಲಾಗುತ್ತಿತ್ತು.

ಈ ವೇಳೆ ಬೆಂಝ್ ಕಾರನ್ನು ತಡೆದು ಪರಿಶೀಲನೆ ನಡೆಸಿದಾಗ ದಾಖಲೆ ಇಲ್ಲದ 10 ಲಕ್ಷ ನಗದು ಹಣ ಪತ್ತೆಯಾಗಿದೆ.

ಕಾರಿನಲ್ಲಿದ್ದ ಇಬ್ಬರು ತಾವು ವ್ಯಾಪಾರಿಗಳು ಅಂತಾ ಪೊಲೀಸರ ಮುಂದೆ ಹೇಳಿದ್ದಾರೆ.

ಆದರೆ ಹಣಕ್ಕೆ ಯಾವುದೇ ದಾಖಲೆ ಇಲ್ಲದೇ ಇರೋದು ಅನುಮಾನಕ್ಕೆ ಕಾರಣವಾಗಿದೆ. ಸದ್ಯ ಆರ್ಟಿ ನಗರ ಪೊಲೀಸರು ಕಾರಿನಲ್ಲಿದ್ದ ಇಬ್ಬರನ್ನೂ ವಶಕ್ಕೆ ಪಡೆದು ಹಣದ ಮೂಲದ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ.

# ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಬದ್ಧ: ಮುಖ್ಯಮಂತ್ರಿ ಬೊಮ್ಮಾಯಿ

ಕಲಬುರಗಿ: ಈ ಭಾಗದಲ್ಲಿ ಕಾಂಗ್ರೆಸ್ ನ ದೊಡ್ಡ ದೊಡ್ಡ ನಾಯಕರಿದ್ದರೂ ಈ ಭಾಗಕ್ಕೆ ಹಿಂದುಳಿದ ಪ್ರದೇಶ ಎನ್ನುವ ಹಣೆಪಟ್ಟಿ ತೆಗೆದು ಹಾಕಲು ಸಾಧ್ಯವಾಗಿಲ್ಲ. ಬಿ.ಎಸ್ ಯಡಿಯೂರಪ್ಪನವರು ನಾಯಕತ್ವದಲ್ಲಿ 371 ಜೆ ಜಾರಿಗೆ ತರಲಾಗಿದೆ. ಅಪ್ಪುಗೌಡರು ಕಲ್ಬುರ್ಗಿಯ ಸಂಪೂರ್ಣ ಅಭಿವೃದ್ಧಿ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಶುಕ್ರವಾರ ಕಲಬುರ್ಗಿ ದಕ್ಷಿಣ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ದತ್ತಾತ್ರೆಯ ಪಾಟೀಲ್ ರೇವೂರ (ಅಪ್ಪುಗೌಡ ಪಾಟೀಲ್) ಪರ ರೋಡ್ ಶೋ ನಡೆಸಿದ ಬಳಿಕ ಅವರು ಮಾತನಾಡಿದರು. “ಇಂತಹ ಮಳೆಯಲ್ಲಿಯೂ ಇಷ್ಟೊಂದು ಜನರು ಸೇರಿರುವ ನಿಮ್ಮ ಉತ್ಸಾಹ ನೋಡಿದರೆ ಖುಷಿಯಾಗುತ್ತದೆ. ಅಪ್ಪುಗೌಡರು ದಾಖಲೆ ಮತಗಳ ಅಂತರದಿಂದ ಗೆಲ್ಲುತ್ತಾರೆ ಎನ್ನುವ ವಿಶ್ವಾಸ ಇದೆ” ಎಂದು ಬೊಮ್ಮಾಯಿ ಹೇಳಿದರು.

ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ



ಅಧ್ಯಕ್ಷರಾಗಿ ಅಪ್ಪುಗೌಡರು ಇಡೀ ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಶ್ರಮಿಸಿದ್ದಾರೆ. ಹತ್ತು ವರ್ಷದಲ್ಲಿ ಅಪ್ಪುಗೌಡರು ಕಲಬುರ್ಗಿ ಸಂಪೂರ್ಣ ಅಭಿವೃದ್ಧಿ ಮಾಡಿದ್ದಾರೆ.

ಕಾಂಗ್ರೆಸ್ ನವರು ಅಧಿಕಾರದಲ್ಲಿ ಇದ್ದಾಗ ಒಂದು ಸಾವಿರ ಕೋಟಿ ರೂ. ಮೀಸಲಿಡುತ್ತಿದ್ದರು. ಆದರೆ, ಕೇವಲ 300 ಕೋಟಿ ಮಾತ್ರ ಖರ್ಚಾಗುತ್ತಿತ್ತು. ನಾವು ಬಂದ ಮೇಲೆ ಕಲಬುರ್ಗಿ ಅಭಿವೃದ್ಧಿ ಗೆ ಹೆಚ್ಚಿನ ಅನುದಾನ ನೀಡಿದ್ದೇವೆ ಎಂದರು. ಕಳೆದ ವರ್ಷ 3 ಸಾವಿರ ಕೋಟಿ ಕೊಟ್ಟಿದ್ದೆ. ಈ ವರ್ಷ 5 ಸಾವಿರ ಕೋಟಿ ಕೊಡುತ್ತಿದ್ದೇನೆ” ಎಂದರು.

ಕಲಬುರ್ಗಿಯಲ್ಲಿ ಜಯದೇವ ಆಸ್ಪತ್ರೆ, ವಿಮಾನ ನಿಲ್ದಾಣ, ಕ್ಯಾನ್ಸರ್ ಆಸ್ಪತ್ರೆ ಆರಂಭ ಮಾಡುತ್ತೇವೆ. ಕಾಂಗ್ರೆಸ್ ನವರು ಗ್ಯಾರೆಂಟಿ ಅಂತ ಹೇಳುತ್ತಿದ್ದಾರೆ. ಕಾಂಗ್ರೆಸ್ ಅಂದರೆ ಭ್ರಷ್ಟಾಚಾರ. ಕಾಂಗ್ರೆಸ್ ನವರು ಮಂಡಳಿಗೆ ಮೀಸಲಿಟ್ಟ ಹಣವನ್ನೂ ಖರ್ಚು ಮಾಡದೇ ಕಾಲ ಹರಣ ಮಾಡಿದ್ದಾರೆ” ಎಂದರು.

ಈ ಭಾಗದಲ್ಲಿ ದೊಡ್ಡ ದೊಡ್ಡ ನಾಯಕ–ರಿದ್ದಾರೆ. ಆದರೂ ಈ ಭಾಗಕ್ಕೆ ಹಿಂದುಳಿದ ಪ್ರದೇಶ ಅನ್ನುವ ಹಣೆ ಪಟ್ಟಿ ತೆಗೆದು ಹಾಕಲು ಸಾಧ್ಯವಾಗಿಲ್ಲ.

ವೈಜನಾಥ ಪಾಟೀಲರ ಹೋರಾಟದ ಫಲವಾಗಿ ನಮ್ಮ ನಾಯಕರಾದ ಯಡಿಯೂರಪ್ಪ ಅವರ ನಾಯಕತ್ವದಲ್ಲಿ 371ಜೆ ಜಾರಿಗೆ ತರಲಾಗಿದೆ. ಆದರೆ, ಕಾಂಗ್ರೆಸ್ ಅವಧಿಯಲ್ಲಿ 371 ಜೆ ಯಿಂದ ಈ ಭಾಗದ ಯುವಕರಿಗೆ ಯಾವುದೇ ಅನುಕೂಲ ಆಗಲಿಲ್ಲ. ನಾವು ಈ ಭಾಗದಲ್ಲಿ 14,000 ಶಿಕ್ಷಕರ ಹುದ್ದೆ ನೇಮಕ ಮಾಡಿಕೊಳ್ಳಲು ತೀರ್ಮಾನಿಸಿದ್ದೇವೆ” ಎಂದರು.

# ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗಾಗಿ ಬಿಜೆಪಿಗೆ ಮತ ನೀಡಿ: ಶಾಸಕ ಬಾಲಚಂದ್ರ ಜಾರಕಿಹೊಳಿ

ಮೂಡಲಗಿ: ಜನರ ಆಶೀರ್ವಾದದಿಂದ ಕಳೆದ 19 ವರ್ಷಗಳಿಂದ ಈ ಭಾಗದ ಶಾಸಕನಾಗಿ, ಸಚಿವನಾಗಿ ಹಾಗೂ ಕೆಎಮ್‌ಎಫ್ ಅಧ್ಯಕ್ಷನಾಗಿ ಅರಭಾವಿ ಮತಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರದ ವಿವಿಧ ಯೋಜನೆಗಳನ್ನು ಅನುಷ್ಠಾನ ಮಾಡಿದ್ದೇನೆ. ಕ್ಷೇತ್ರವು ಇನ್ನಷ್ಟೂ ಅಭಿವೃದ್ಧಿಯಾಗಲು ಈ ಚುನಾವಣೆಯಲ್ಲಿ ನನಗೆ ಮತ ನೀಡಿ ಆಶೀರ್ವಾದ ಮಾಡುವಂತೆ ಅರಭಾವಿ ಬಿಜೆಪಿ ಅಭ್ಯರ್ಥಿ ಹಾಗೂ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರು ಕೋರಿದರು.

ಗುರುವಾರ ಸಂಜೆ ಪಟ್ಟಣದ ಶಿವಬೋಧರಂಗ ಬ್ಯಾಂಕಿನ ಸಭಾಂಗಣದಲ್ಲಿ ಮೂಡಲಗಿ ಮತ್ತು ಗುರ್ಲಾಪೂರ ವ್ಯಾಪ್ತಿಯ ಮುಖಂಡರನ್ನು ದ್ದೇಶಿಸಿ ಮಾತನಾಡಿದ ಅವರು, ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿ ಕೇವಲ ಬಿಜೆಪಿಯಿಂದ ಮಾತ್ರ ಸಾಧ್ಯ ಎಂದು ಹೇಳಿದರು.

ಮೂಡಲಗಿ ಮತ್ತು ಗುರ್ಲಾಪೂರ ಪಟ್ಟಣದ ಶ್ರೇಯೋಭಿವೃದ್ಧಿಗೆ ಹಲವಾರು ಯೋಜನೆಗಳನ್ನು ಅನುಷ್ಠಾನ ಮಾಡಲಾಗಿದೆ. ಜನ–ರಿಗೆ ಅಗತ್ಯವಿರುವ ಎಲ್ಲ ಮೂಲ ಸೌಕರ್ಯಗಳನ್ನು ಒದಗಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಅಭಿವೃದ್ಧಿ ಕಾರ್ಯಗಳಲ್ಲಿ ಎಂದಿಗೂ ಪಕ್ಷಪಾತ ಮಾಡಿಲ್ಲ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಜನರ ಆಶೋತ್ತರಗಳಿಗೆ ಸ್ಪಂದಿಸಿದ್ದೇನೆಂದು ತಿಳಿಸಿದರು.



ಜನನಾಯಕನಾಗಿ ಎಂದಿಗೂ ಗುರುತಿಸಿಕೊಂಡಿಲ್ಲ, ಸಾಮಾನ್ಯ ಜನರ ಮಧ್ಯ ಇದ್ದುಕೊಂಡು ಜನಸೇವಕನಾಗಿ ಈ ಭಾಗವನ್ನು ಪ್ರಗತಿ ಮಾಡಿದ್ದೇನೆ. ಮೂಡಲಗಿ ಪಟ್ಟಣದ ಏಳ್ಗೆಗಾಗಿ ಹಗಲಿರುಳು ಶ್ರಮಿಸುತ್ತಿದ್ದೇನೆ. ಅಭಿವೃದ್ಧಿಯಾಗಬೇಕಾದರೇ ಅದು ನಮ್ಮಿಂದ ಹಾಗೂ ನಮ್ಮ ಸರ್ಕಾರದಿಂದ ಮಾತ್ರ ಸಾಧ್ಯ. ಬೇರೆಯವರಂತೆ ಜನರನ್ನು ಮರಳು ಮಾಡಲು ಸುಳ್ಳು ಆಶ್ವಾಸನೆಗಳನ್ನು ನೀಡುವದಿಲ್ಲ. ಅದು ನನ್ನ ಜಾಯಮಾನವೂ ಅಲ್ಲ. ಎಲ್ಲ ಸಮುದಾಯಗಳನ್ನು ಒಟ್ಟುಗೂಡಿಸಿ ವ್ಯವಸ್ಥಿತವಾಗಿ ಸಂಘಟಿತ ರಾಗಲು ಪ್ರಯತ್ನಿಸಿದ್ದೇನೆ. ಸಣ್ಣ–ಪುಟ್ಟ ಸಮಾಜಗಳು ಸಹ ಸಮಾಜದ ಮುಖ್ಯವಾಹಿನಿಗೆ ತರಲು ನನ್ನಿಂದ ಆಗುವಷ್ಟು ಕೆಲಸ ಮಾಡಿದ್ದೇವೆ. ಎಲ್ಲ ಸಮಾಜಗಳು ಪರಸ್ಪರ ಸಹೋದರತ್ವ ಮನೋಭಾವನೆಯನ್ನು ಬೆಳೆಸಿಕೊಂಡು ಸೌಹಾರ್ದಯುತವಾಗಿ ಬದುಕು ನಿರ್ವಹಿಸಲು ಸಾಕಷ್ಟು ಶ್ರಮ ವಹಿಸಿದ್ದೇನೆಂದು ಹೇಳಿದರು.

ದೇವರು, ತಾಯಿ–ತಂದೆ ಮತ್ತು ಕ್ಷೇತ್ರದ ಜನರ ಆಶೀರ್ವಾದದಿಂದ ಅರಭಾವಿ ಕ್ಷೇತ್ರವನ್ನು ಅಭಿವೃದ್ಧಿ ಮಾಡಿದ್ದೇನೆ. ಇದಕ್ಕೆ ನಾನು ಕೈಗೊಂಡಿರುವ ನಾನಾ ಕಾಮಗಾ–ರಿಗಳೇ ಸಾಕ್ಷಿಯಾಗಿವೆ.

ಕೆಲವರು ತಮ್ಮ ತಪ್ಪನ್ನು ಮರೆ ಮಾಚಿಕೊಳ್ಳಲು ಇಲ್ಲ ಸಲ್ಲದ ಆರೋಪಗಳನ್ನು ಈ ಚುನಾವಣೆಯಲ್ಲಿ ಮಾಡುತ್ತಿದ್ದಾರೆ. ಅಭಿವೃದ್ಧಿ ಕಾರ್ಯಗಳನ್ನು ಸಹಿಸದ ಅಂತವರಿಂದ ಜನರಿಗೆ ನ್ಯಾಯ ಒದಗಿಸಿಕೊಡಲು ಸಾಧ್ಯವಿಲ್ಲ. ಜನರ ಕಷ್ಟಗಳು ಏನು ಎಂಬುವುದು ಅಂತವರಿಗೆ ಅರ್ಥವಾಗುವದಿಲ್ಲ ಎಂದು ಅವರು ತಿಳಿಸಿದರು.

ಕೇಂದ್ರ ಹಾಗೂ ರಾಜ್ಯದಲ್ಲಿ ಡಬಲ್ ಇಂಜಿನ್ ಸರ್ಕಾರ ಇದೆ. ಕರ್ನಾಟಕದ ಅಭಿವೃದ್ಧಿಯಾಗಬೇಕಾದರೇ ಅದು ನಮ್ಮ ಸರ್ಕಾರದಿಂದ ಮಾತ್ರ ಸಾಧ್ಯವಿದೆ. ರಾಜ್ಯದಲ್ಲಿಯೂ ಬಿಜೆಪಿ ಮತ್ತೊಮ್ಮೆ ಅಧಿಕಾರಕ್ಕೆ ಬರಲಿದೆ. ನನಗೆ ನಿಮ್ಮ ಅಮೂಲ್ಯ ಮತ ನೀಡುವ ಮೂಲಕ ಪ್ರಧಾನಿ ನರೇಂದ್ರ ಮೋದಿ ಮತ್ತು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರ ಕೈಗಳನ್ನು ಬಲ ಪಡಿಸಬೇಕು. ಶೇಜ್ ನಂ 5 ಇದ್ದು ಕಮಲದ ಗುರ್ತಿಗೆ ಪ್ರಚಂಡ ಮತ ನೀಡುವಂತೆ ಅವರು ಮನವಿ ಮಾಡಿದರು.

## ಡಾ. ರವಿ ಪಾಟೀಲ ಚುನಾವಣಾ ಪ್ರಚಾರ



ಬೆಳಗಾವಿ: ಶುಕ್ರವಾರ ಬೆಳಗ್ಗೆ ಬೆಳಗಾವಿ ಉತ್ತರ ಕ್ಷೇತ್ರ ಬಿಜೆಪಿ ಅಧಿಕೃತ ಅಭ್ಯರ್ಥಿಯಾದ ಡಾ. ರವಿ ಪಾಟೀಲ ಅವರು ಶಿವಬಸವ ನಗರದ ಎಲ್ಲ ಗಲ್ಲಿ ಗಲ್ಲಿಗಳಲ್ಲಿ ಚುನಾವಣಾ ಪ್ರಚಾರ ಮಾಡಿದರು

ಈ ಪ್ರಚಾರದಲ್ಲಿ ಬೆಳಗಾವಿ ಉತ್ತರದ ಹಾಲಿ ಶಾಸಕರಾದ ಅನಿಲ ಬೇನಕೆಯವರು ಕೂಡ ಮನೆ ಮನೆಗೆ ತೆರಳಿ ಪ್ರಚಾರದಲ್ಲಿ ಭಾಗಾಯಾಗಿ ಬಿಜೆಪಿ ಅಭ್ಯರ್ಥಿಯಾದ ಡಾ.ರಾವಿ ಪಾಟೀಲ ಪರವಾಗಿ ಮತಯಾಚನೆ ಮಾಡಿದರು.ಅದೆ ರೀತಿ ಬೆಳಗಾವಿ ಸಂಸದರಾದ ಮಂಗಳಾ ಅಂಗಡಿಯವರು ಕೂಡ ಪ್ರಚಾರದಲ್ಲಿ ಭಾಗವಹಿಸಿ ಮಹಿಳೆಯರು ಬಿಜೆಪಿ ಪಕ್ಷಕ್ಕೆ ಮತ ನೀಡುವಂತೆ ಮತದಾರರ ಮನೆ ಮನೆಗೆ ತೆರಳಿ ಮುಂಬರುವ ಚುನಾವಣೆಯಲ್ಲಿ ಭಾರತೀಯ ಜನತಾ ಪಕ್ಷವನ್ನು ಬಹುಮತದಿಂದ ಗೆಲ್ಲಿಸುವಂತೆ ಮತದಾರರಲ್ಲಿ ವಿನಂತಿಸಿಕೊಂಡರು.

## ಮೇ.1 ರಂದು ಜಿಲ್ಲಾ ಚುಸಾಪ ಸಮ್ಮೇಳನದ ಸ್ಮರಣಸಂಚಿಕೆ ಬಿಡುಗಡೆ

ಬೆಳಗಾವಿ: ಇದೇ ಮೇ 1, ಸೋಮವಾರ ಮ. 4 ಗಂಟೆಗೆ ಕನ್ನಡ ಸಾಹಿತ್ಯ ಭವನದಲ್ಲಿ ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ರಾಮದುರ್ಗದಲ್ಲಿ ಜರುಗಿದ ಮೂರನೇ ಜಿಲ್ಲಾ ಸಮ್ಮೇಳನದ ಸ್ಮರಣ ಸಂಚಿಕೆ " ಚುಟುಕು ಪ್ರಭೆ" ಮತ್ತು ಜಿನದತ್ತ ದೇಸಾಯಿ ಅವರ ಕುರಿತಾದ ಲೇಖನಗಳ ಸಂಕಲನ "ಸಮರಸ" ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

## ಶಾಲಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಧಾರವಾಡ: 2023–24 ನೇ ಸಾಲಿಗೆ ಧಾರವಾಡ ಜಿಲ್ಲೆಯಲ್ಲಿನ 04 ಅಲ್ಪಸಂಖ್ಯಾತರ ಮೌಲಾನಾ ಆಜಾದ ಆಂಗ್ಲ ಮಾದರಿ ಶಾಲೆಗಳ 6ನೇ ತರಗತಿ (ಆಂಗ್ಲ ಮಾಧ್ಯಮ) ಪ್ರವೇಶಕ್ಕಾಗಿ ಅಲ್ಪಸಂಖ್ಯಾತರ ಮತ್ತು ಹಿಂದುಳಿದ ಸಮುದಾಯದ ವಿದ್ಯಾರ್ಥಿಗಳಿಂದ 2023–24ನೇ ಸಾಲಿಗೆ ಅರ್ಜಿ ಅಹ್ವಾನಿಸಲಾಗಿದೆ.

5ನೇ ತರಗತಿ ಪಾಸಾದ ಅಲ್ಪಸಂಖ್ಯಾತ ಸಮುದಾಯದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ವಿದ್ಯಾರ್ಥಿಗಳಿಗೆ ಶೇ.75 ಹಾಗೂ ಪರಿಶಿಷ್ಠ ಜಾತಿ, ಪರಿಶಿಷ್ಠ ವರ್ಗ ಹಾಗೂ ಇತರೆ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ (ಒಬಿಸಿ) ಶೇ.25 ಸೀಟುಗಳು ಲಭ್ಯವಿದೆ. ಧಾರವಾಡ ಜಿಲ್ಲೆಯಲ್ಲಿರುವ ಪಿ.ಎಚ್.ಕ್ಯೂ ಆವರಣ ಧಾರವಾಡ, ನವನಗರ ಹುಬ್ಬಳ್ಳಿ, ಸದಾಶಿವನಗರ ಹುಬ್ಬಳ್ಳಿ ಹಾಗೂ ನವಲಗುಂದ ಇಲ್ಲಿನ ಮೌಲಾನಾ ಆಜಾದ ಮಾದರಿ ಶಾಲೆಯಗಳಿಗೆ ಪ್ರವೇಶಕ್ಕಾಗಿ ಆಸಕ್ತ ವಿದ್ಯಾರ್ಥಿಗಳು ಮೇ. 15 ರೊಳಗೆ ಅರ್ಜಿ ಸಲ್ಲಿಸಬಹುದು.

ಪ್ರವೇಶ ಬಯಸುವ ಅಲ್ಪಸಂಖ್ಯಾತರ ಮತ್ತು ಇತರೆ ಪ್ರವರ್ಗಗಳ ಆಸಕ್ತ ವಿದ್ಯಾರ್ಥಿಗಳು ಸಂಬಂಧಿಸಿದ ಅರ್ಜಿಗಳನ್ನು ಸಲ್ಲಿಸಲು ಉಚಿತ ಸೇವೆ ಪಡೆಯಲು ಸಮೀಪದ ಜಿಲ್ಲಾ ಅಲ್ಪಸಂಖ್ಯಾತರ ಕಚೇರಿ ಅಥವಾ ಆಯಾ ಶಾಲೆಗಳು ಅಥವಾ ತಾಲ್ಲೂಕು ಅಲ್ಪಸಂಖ್ಯಾತರ ಮಾಹಿತಿ ಕೇಂದ್ರಗಳಿಗೆ ಭೇಟಿ ನೀಡಬಹುದು.

ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಅಧಿಕಾರಿಗಳ ಕಚೇರಿ ಧಾರವಾಡ.–0836–2971590, ಮುಖ್ಯೋಪಾಧ್ಯಾಯರು, ಮೌಲಾನಾ ಆಜಾದ ಆಂಗ್ಲ ಮಾದರಿ ಶಾಲೆ ಪಿ.ಎಚ್.ಕ್ಯೂ ಆವರಣ ಧಾರವಾಡ–9886383284, 8095052640, ಮುಖ್ಯೋಪಾಧ್ಯಾಯರು, ಮೌಲಾನಾ ಆಜಾದ ಆಂಗ್ಲ ಮಾದರಿ ಶಾಲೆ ನವನಗರ ಹುಬ್ಬಳ್ಳಿ–9743404329, ಮುಖ್ಯೋಪಾಧ್ಯಾಯರು, ಮೌಲಾನಾ ಆಜಾದ ಆಂಗ್ಲ ಮಾದರಿ ಶಾಲೆ ಸದಾಶಿವನಗರ ಹುಬ್ಬಳ್ಳಿ–9480407898, ಮುಖ್ಯೋಪಾಧ್ಯಾಯರು, ಮೌಲಾನಾ ಆಜಾದ ಆಂಗ್ಲ ಮಾದರಿ ಶಾಲೆ ನವಲಗುಂದ–8497847789

ಅಲ್ಪಸಂಖ್ಯಾತರ ತಾಲ್ಲೂಕಾ ಮಾಹಿತಿ ಕೇಂದ್ರಗಳು: ಅಲ್ಪಸಂಖ್ಯಾತರ ತಾಲ್ಲೂಕಾ ಮಾಹಿತಿ ಕೇಂದ್ರ ಧಾರವಾಡ.–9738287549, ಅಲ್ಪಸಂಖ್ಯಾತರ ತಾಲ್ಲೂಕಾ ಮಾಹಿತಿ ಕೇಂದ್ರ ಹುಬ್ಬಳ್ಳಿ–8867718261, ಅಲ್ಪಸಂಖ್ಯಾತರ ತಾಲ್ಲೂಕಾ ಮಾಹಿತಿ ಕೇಂದ್ರ ನವಲಗುಂದ–8746894524 ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜವಾಹರ ನವೋದಯ ವಿದ್ಯಾಲಯ 6ನೇ ವರ್ಗಕ್ಕೆ ಏ.29 ರಂದು ಪ್ರವೇಶ ಪರೀಕ್ಷೆ

ಧಾರವಾಡ: ಧಾರವಾಡ ಜಿಲ್ಲೆಯ ಜವಾಹರ ನವೋದಯ ವಿದ್ಯಾಲಯದ 2023–24ನೇ ಸಾಲಿನ 6 ನೇ ತರಗತಿಯ ಪ್ರವೇಶಕ್ಕೆ ನಡೆಯುವ ಪರೀಕ್ಷೆಯು ಏಪ್ರಿಲ್ 29 ರಂದು ಬೆಳಿಗ್ಗೆ 11–30 ಕ್ಕೆ ಜಿಲ್ಲೆಯ ಆರ್‌ಎಲ್‌ಎಸ್, ಸೆಂಟ್ ಜೋಶೆಫ್, ಪ್ರಜೆಂಟೇಶನ್ ಹೈಸ್ಕೂಲ್, ಕರ್ನಾಟಕ ಹೈಸ್ಕೂಲ್, ಆದರ್ಶ ವಿದ್ಯಾಲಯ, ಜವಾಹರ ನವೋದಯ ವಿದ್ಯಾಲಯ, ಕಲಘಟಗಿಯ ಸಿಜಿಹೆಚ್‌ಎಸ್, ಹೆಚ್ಕೆಬಿಎಸ್, ಗರ್ಲ್ಸ ಇಂಗ್ಲೀಷ ಮಿಡಿಯಮ್ ಸ್ಕೂಲ್, ಕುಂದಗೋಳದ ಹರಭಟ್ಟ ಹೈಸ್ಕೂಲ್, ಹರಭಟ್ಟ ಪಿಯು ಕಾಲೇಜು, ಗುರುದೇವ ಮಲ್ಲಿಕಾರ್ಜುನ ಹೈಸ್ಕೂಲ, ಹುಬ್ಬಳ್ಳಿಯ ಬಾಶೆಲ್ ಮಿಶನ್ ಗರ್ಲ್ಸ ಹೈಸ್ಕೂಲ್, ಶ್ರೀ ದುರ್ಗಾದೇವಿ ಕನ್ನಡ ಬಾಯ್ಸ್ ಹೈಸ್ಕೂಲ್, ಲ್ಯಾಮಿಂಗ್ಟನ್ ಗರ್ಲ್ಸ ಹೈಸ್ಕೂಲ್, ಕರ್ನಾಟಕ ಪಬ್ಲಿಕ್ ಸ್ಕೂಲ್, ನವಲಗುಂದದ ಡಿಸಿಎಂ ಗುರುಕುಲ, ಮಾಡೆಲ್ ಗಂಡು ಮಕ್ಕಳ ಶಾಲೆ, ಮಾಡೆಲ್ ಹೆಣ್ಣು ಮಕ್ಕಳ ಶಾಲೆಗಳಲ್ಲಿ ನಡೆಯಲಿದೆ ಎಂದು ವಿದ್ಯಾಲಯದ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.


## ಏ. 30ಕ್ಕೆ ಪ್ರಜಾಪ್ರಭುತ್ವಕ್ಕಾಗಿ ನಡೆ ಎಂಬ ಮತದಾನ ಜಾಗೃತಿ ಕಾರ್ಯಕ್ರಮ

ಧಾರವಾಡ: ಕರ್ನಾಟಕ ವಿಧಾನಸಭಾ ಸಾರ್ವತ್ರಿಕ ಚುನಾವಣೆ–2023 ಕ್ಕೆ ಸಂಬಂಧಿಸಿದಂತೆ ಮೇ.10, 2023 ರ ಬುಧವಾರದಂದು ಮತದಾನ ಜರಗಲಿದೆ. ಮತದಾರರಲ್ಲಿ ಮತದಾನದ ಅರಿವು ಮೂಡಿಸುವ ಉದ್ದೇಶದಿಂದ ಮತದಾನದ ಮಹತ್ವ, ಮತದಾನದಲ್ಲಿ ಜನರ ಪಾತ್ರವೇನು ಹಾಗೂ ಮತದಾನದ ಶೇಕಡಾವಾರು ಪ್ರಮಾಣವನ್ನು ಹೆಚ್ಚಿಸಲು ವ್ಯವಸ್ಥಿತ ಮತದಾರರ ಶಿಕ್ಷಣ ಮತ್ತು ಚುನಾವಣೆಯಲ್ಲಿ ಭಾಗವಹಿಸುವಿಕೆ ಎಂಬ ವಿನೂತನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಸಾರ್ವಜನಿಕರಲ್ಲಿ ಅರಿವು ಮೂಡಿಸುವ ದಿಶೆಯಲ್ಲಿ ಜಿಲ್ಲಾಡಳಿತ ಹಾಗೂ ಮಹಾನಗರ ಪಾಲಿಕೆ ವತಿಯಿಂದ ಈ ಮತದಾನ ಜಾಗೃತಿ ನಡೆ ಏ.30 ರವಿವಾರದಂದು ಮುಂಜಾನೆ 7 ಗಂಟೆಗೆ ತೋಳನಕೇರಿಯಿಂದ ಸಿದ್ದೇಶ್ವರ ಸರ್ಕಲ್ ಮತ್ತೆ ಸಿದ್ದೇಶ್ವರ ಸರ್ಕಲ್ದಿಂದ ತೋಳನಕೆರೆವರೆಗೆ ಪ್ರಜಾಪ್ರಭುತ್ವಕ್ಕಾಗಿ ನಡೆ (Walk for Democracy) ಎಂಬ ಮತದಾನ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಿ ಮತದಾನದ ದ್ಯೇಯೋದ್ದೇಶಗಳ ಅರಿವು ಮೂಡಿಸುವ ಕಾರ್ಯಕ್ರಮ ಆಯೋಜಿಸಲಾಗಿದೆ.

ಕಾರ್ಯಕ್ರಮದಲ್ಲಿ ಸಾರ್ವಜನಿಕರು ತಪ್ಪದೇ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮತದಾರರ ನೊಂದಣಾಧಿಕಾರಿಗಳು ಆಗಿರುವ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತ ಡಾ. ಗೋಪಲಾಕೃಷ್ಣ ಬಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೆಡಿಎಸ್ ನ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆ



ಅಥಣಿ: ಮಾಜಿ ಡಿಸಿಎಂ, ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಸಮ್ಮುಖದಲ್ಲಿ ಅಥಣಿ ಕ್ಷೇತ್ರದ ಜೆಡಿಎಸ್ ಮುಖಂಡರು ಹಾಗೂ ಸಾವಿರಾರು ಕಾರ್ಯಕರ್ತರು ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಸೇರ್ಪಡೆಯಾದರು.

ಈ ಸಂದರ್ಭದಲ್ಲಿ ಮಾತನಾಡಿದ ಜೆಡಿಎಸ್ ಮುಖಂಡರು, ಲಕ್ಷ್ಮಣ ಸವದಿಯವರು ಅಭಿವೃದ್ಧಿ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಅಥಣಿ ಮತಕ್ಷೇತ್ರದ ಚಿತ್ರಣವನ್ನೇ ಬದಲಾಯಿಸಿದ್ದಾರೆ.

ಕರೊನಾ ಸಂದರ್ಭ, ಕೃಷ್ಣಾ ನದಿ ಪ್ರವಾಹದಿಂದ ಜನ ಸಂಕಷ್ಟದ ಸಮಯದಲ್ಲಿ ನೆರವು ಒದಗಿಸುತ್ತಾ ಬಂದಿದ್ದಾರೆ. ಹಸಿರುಕ್ರಾಂತಿ ಹರಿಕಾರರಾಗಿ, ಸದಾ ಜನಸೇವೆ, ಅಭಿವೃದ್ಧಿ ಕಾರ್ಯಗಳ ಮೂಲಕ ಜನಮನ ಗೆದ್ದಿದ್ದಾರೆ ಎಂದರು.

ಅಥಣಿ ಮತಕ್ಷೇತ್ರವು ಮತ್ತಷ್ಟು ಅಭಿವೃದ್ಧಿ ಹೊಂದಲು ಲಕ್ಷ್ಮಣ ಸವದಿಯವರಂತಹ ನಾಯಕರ ಅಗತ್ಯವಿದೆ.

ಆದ್ದರಿಂದ ಈ ಚುನಾವಣೆಯಲ್ಲಿ ನಾವು ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಸವದಿಯವರನ್ನು ಬೆಂಬಲಿಸುವ ನಿರ್ಧಾರ ಮಾಡಿದ್ದೇವೆ ಎಂದು ತಿಳಿಸಿದರು.

ಇದೇ ವೇಳೆ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಸವದಿ, ಕಾಂಗ್ರೆಸ್ ಮುಖಂಡರಾದ ಗಜಾನನ ಮಂಗಸೂಳಿ, ಅಥಣಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶಿದ್ಧಾರ್ಥ ಸಿಂಗೆ, ತೆಲಸಂಗ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಾಂತ ಪೂಜಾರಿ, ಅನೀಲ ಸುಣದೋಳಿಯವರ ಸಮ್ಮುಖದಲ್ಲಿ ಜೆಡಿಎಸ್‌ನ ಮುಖಂಡರು ಹಾಗೂ ಕಾರ್ಯಕರ್ತರಿಗೆ ಕಾಂಗ್ರೆಸ್ ಪಕ್ಷದ ಶಾಲು ಹೊದಿಸಿ ಪಕ್ಷಕ್ಕೆ ಬರಮಾಡಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ ಜೆಡಿಎಸ್‌ನ ಅಥಣಿ ತಾಲೂಕು ಅಧ್ಯಕ್ಷರು ಹಾಗೂ ತಾಲೂಕಾ ಪಂಚಮಸಾಲಿ ಸಮಾಜದ ಮಾಜಿ ಅಧ್ಯಕ್ಷರಾದ ಅಣ್ಣಾರಾಯ ಶಿವರಾಯ ಹಾಲಳ್ಳಿ, ಜೆಡಿಎಸ್‌ನ ರಾಜ್ಯ ಕಾರ್ಯಕಾರಿಣಿ ಸಮಿತಿ ಮಾಜಿ ಸದಸ್ಯರು ಹಾಗೂ ಅಥಣಿ ತಾಲೂಕು ವೀರಶೈವ ಪಂಚಮಸಾಲಿ ಸಮಾಜದ ಅಥಣಿ ಘಟಕದ ನಿರ್ದೇಶಕರಾದ ಲಕ್ಕಪ್ಪ ಮುಡಸಿ, ಜೆಡಿಎಸ್‌ನ ಅಥಣಿ ತಾಲೂಕು ಬ್ಲಾಕ್ ಅಧ್ಯಕ್ಷೆ ಶ್ರೀಮತಿ ಶೋಭಾ ರಮೇಶ ಆಲಬಾಳ, ಮುಖಂಡರಾದ ಮುರಗೆಪ್ಪಾ ನಾಯಿಕ, ರವಿ ಹಂಜಿ, ಬಾಬುರಾವ್ ಕುಳ್ಳೊಳ್ಳಿ, ಬಸಪ್ಪಾ ಬಿರಾದಾರ, ಮಲಕಪ್ಪ ಹಲಗೊಂಡ, ಚನ್ನಪ್ಪ ಹಾಲಳ್ಳಿ, ಗೋಪಾಲ ಬೇಡರಟ್ಟಿ, ರವಿ ಬೇಡರಟ್ಟಿ, ಸುರೇಶ ಖೋತ, ಮಲ್ಲಪ್ಪ ಇಂಗಳಿ, ಶಿವಾನಂದ ಗಲಗಲಿ, ಸಿದ್ದಲಿಂಗ ಡವಳೇಶ್ವರ, ಶ್ರೀಶೈಲ ಸಿಂಧೂರ, ಮುತ್ತಪ್ಪ ಮರನೂರ, ಜಗದೀಶ ಹಿರೇಮಠ, ಹನಮಂತ ಮಾಳಿ, ಸುರೇಶ ಮಾಕಾಣಿ, ತವಣಪ್ಪ ಸವರಿ, ಧರೆಪ್ಪ ಮಾಳಿ, ದುಂಡಪ್ಪ ಮಾಳಿ, ಮಾರುತಿ ಕಾಂಬಳೆ, ಶಾನು ಕೋಹಳ್ಳಿ ಸೇರಿದಂತೆ ಹಲವಾರು ಜೆಡಿಎಸ್ ಮುಖಂಡರು, ಅಪಾರ ಕಾರ್ಯಕರ್ತರು ಉಪಸ್ಥಿತರಿದ್ದರು.

## ಕಾಂಗ್ರೆಸ್ ಸೇರಿದ ಗೀತಾ ಶಿವರಾಜ್ ಕುಮಾರ್



ಬೆಂಗಳೂರು: ಚಿತ್ರನಟ ಶಿವರಾಜ್ ಕುಮಾರ್ ಅವರ ಪತ್ನಿ ಗೀತಾ ಶಿವರಾಜ್ ಕುಮಾರ್ ಅವರು ಶುಕ್ರವಾರ ಕಾಂಗ್ರೆಸ್ ಪಕ್ಷವನ್ನು ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಕಾಂಗ್ರೆಸ್ ಬಾವುಟ ನೀಡುವ ಮೂಲಕ ಗೀತಾ ಅವರನ್ನು ಪಕ್ಷಕ್ಕೆ ಸ್ವಾಗತಿಸಿದರು. ಕೆಪಿಸಿಸಿ ಹಿಂದುಳಿದ ವರ್ಗಗಳ ಘಟಕದ ಅಧ್ಯಕ್ಷರೂ ಆಗಿರುವ ಗೀತಾ ಅವರ ಸಹೋದರ ಮಧು ಬಂಗಾರಪ್ಪ,ಎಐಸಿಸಿ ವಕ್ತಾರ. ಗೌರವ್ ವಲ್ಲಭ್, ಕೆಪಿಸಿಸಿ ಸಾಂಸ್ಕೃತಿಕ ಘಟಕದ ಅಧ್ಯಕ್ಷ ಸಾಧು ಕೋಕಿಲ ಉಪಸ್ಥಿತರಿದ್ದರು.

ಗೀತಾ ಅವರು 2014ರ ಲೋಕಸಭಾ ಚುನಾವಣೆಯಲ್ಲಿ ಶಿವಮೊಗ್ಗ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದರು. ನಂತರದ ದಿನಗಳಲ್ಲಿ ಸಕ್ರಿಯ ರಾಜಕಾರಣದಿಂದ ದೂರ ಉಳಿದಿದ್ದರು. ಈಗ ಕಾಂಗ್ರೆಸ್ ಸೇರಿರುವ ಅವರು, ಸೊರಬ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ತಮ್ಮ ಮಧು ಬಂಗಾರಪ್ಪ ಪರ ಪ್ರಚಾರ ನಡೆಸಲಿದ್ದಾರೆ.

## ಬೆಳಗಾವಿಯಲ್ಲಿ 70ಕ್ಕೂ ಹೆಚ್ಚು ರೌಡಿಶೀಟರ್ ಗಳ ಮನೆ ಮೇಲೆ ಪೊಲೀಸರ ದಾಳಿ



ಬೆಳಗಾವಿ: ಬೆಳಗಾವಿ ನಗರದಲ್ಲಿ ಡಿಸಿಪಿ ನೇತೃತ್ವದಲ್ಲಿ ಪೊಲೀಸರು ಶುಕ್ರವಾರ ಬೆಳಗ್ಗೆ ಒಟ್ಟು 70 ರೌಡಿ ಶೀಟರ್‌ಗಳ ಮನೆ ಮೇಲೆ ದಾಳಿ ಕೈಗೊಳ್ಳಲಾಗಿದೆ.

ಎಸಿಪಿ ಅಪರಾಧ ಮತ್ತು ಮಾರ್ಕೆಟ್, ಖಡೇಬಜಾರ ಹಾಗೂ ಬೆಳಗಾವಿ ಗ್ರಾಮೀಣ ಉಪವಿಭಾಗದ ಎಸಿಪಿ ಅವರು ಹಾಗೂ ನಗರದ ಎಲ್ಲ ಠಾಣೆಯ ಪಿಐ ಹಾಗೂ ಸಿಬ್ಬಂದಿಯವರು ಈ ದಾಳಿಯಲ್ಲಿ ಪಾಲ್ಗೊಂಡಿದ್ದರು.

ದಾಳಿ ಕಾಲಕ್ಕೆ ಖಡೇಬಜಾರ ಪೊಲೀಸ್ ಠಾಣಾ ಹದ್ದಿಯ ಜಾಲಗಾರ ಗಲ್ಲಿಯಲ್ಲಿ ವಾಸಿಸುತ್ತಿದ್ದ ಒಬ್ಬ ರೌಡಿ ಶೀಟರ್ ಮನೆಯ ಮೇಲೆ ದಾಳಿ ಮಾಡಿ ಪರಿಶೀಲಿಸಿದಾಗ, ಆತನ ಬಳಿ 02 ತಲವಾರಗಳು ಸಿಕ್ಕಿದ್ದು, ಅವುಗಳನ್ನು ಜಪ್ತಪಡಿಸಿಕೊಂಡು ಆತನ ವಿರುದ್ಧ ಖಡೇಬಜಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಮುಂಬರುವ ಚುನಾವಣೆಯು ಭಯಮುಕ್ತ ಹಾಗೂ ನ್ಯಾಯ ಸಮ್ಮತ ಚುನಾವಣೆ ಜರುಗಿಸುವ ನಿಟ್ಟಿನಲ್ಲಿ ಹಾಗೂ ಬೆಳಗಾವಿ ನಗರದಲ್ಲಿ ಶಾಂತಿ ಸುವ್ಯವಸ್ಥೆ ಕಾಪಾಡಿಕೊಂಡು ಬರುವ ಸಲುವಾಗಿ ಎಲ್ಲ ಮುಂಜಾಗೃತಾ ಕ್ರಮಗಳನ್ನು ಕೈಗೊಳ್ಳಲಾಗಿದೆ.

## ಪಿಎಚ್‌ಡಿ ಪದವಿ ಪ್ರಧಾನ



ಬೆಳಗಾವಿ: ಪ್ರಕಾಶ. ಭೀಮಪ್ಪ. ಭೂತಾಳಿಗೆ ಪಿ ಹೆಚ್ ಡಿ ಪದವಿ ಮೂಲತಃ ಬೈಲಹೊಂಗಲ ತಾಲೂಕಿನ ನೇಗಿನಹಾಳ ಗ್ರಾಮದ ಪ್ರಸ್ತುತ ಧಾರವಾಡ ಜಿಲ್ಲೆಯಲ್ಲಿ ಶಾಲಾ ಶಿಕ್ಷಣ ಇಲಾಖೆಯ ಆಡಳಿತ ಉಪ ನಿರ್ದೇಶಕರ ಕಚೇರಿಯ ಸಹಾಯಕ ಯೋಜನಾ ಸಮನ್ವಯ ಅಧಿಕಾರಿಗಳಾದ ಪ್ರಕಾಶ್ ಬಿ ಭೂತಾಳಿ ಅವರು ಮಂಡಿಸಿದ "ಎ ಕಂಪೆರೆಟಿವ್ ಸ್ಟಡಿ ಆಫ್ ರೆಸಿಡೆನ್ಸಿಯಲ್ ಆಂಡ್ ನಾನ್ ರೆಸಿಡೆನ್ಸಿಯಲ್ ಸೆಕೆಂಡರಿ ಸ್ಕೂಲ್ ಸ್ಟೂಡೆಂಟ್ಸ್ ಅಕಾಡೆಮಿಕ್ ಅಚಿವಮೆಂಟ್ ಆಂಡ್ ಲೆವೆಲ್ ಆಫ್ ಅಡ್ಜಸ್ಟಮೆಂಟ್" ಮಹಾಪ್ರಬಂಧಕ್ಕೆ ಬೆಳಗಾವಿಯ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ ಪಿ ಎಚ್ ಡಿ ಪದವಿ ಪ್ರಧಾನ ಮಾಡಿದೆ ವಿಶ್ವವಿದ್ಯಾಲಯದ ಶಿಕ್ಷಣ ವಿಭಾಗದ ಮುಖ್ಯಸ್ಥರು ಹಾಗೂ ಡೀನ್ ರಾದ ಪ್ರೊ. ಎಮ್ ಸಿ ಎರ್ರಿಸ್ವಾಮಿ ಮಾರ್ಗದರ್ಶನ ಮಾಡಿದರು.

## ನಕಲಿ ಅಂಕಪಟ್ಟಿ ತಯಾರಿಕೆ
### ಸ್ಟಡಿ ಸೆಂಟರ್‌ನ ಮೂವರ ಬಂಧನ




ಹುಬ್ಬಳ್ಳಿ : ಹುಬ್ಬಳ್ಳಿಯ KIOS ಕಚೇರಿ ಮೇಲೆ ಸಿಸಿಬಿ ಪೊಲೀಸರು ದಾಳಿ ನಕಲಿ ಅಂಕಪಟ್ಟಿ ತಯಾರಿಸಿ ಮಾರಾಟ ಮಾಡುತ್ತಿದ್ದ ಸ್ಟಡಿ ಸೆಂಟರ್‌ನ ಮೂವರನ್ನು ಬಂಧಿಸಿದ್ದಾರೆ. ಆರೋಪಗಳನ್ನು ಪ್ರಭುರಾಜ್, ಮೈಲಾರಿ ಮತ್ತು ಮೊಹಮ್ಮದ್ ತೈಹೀದ್ ಎಂದು ಹೇಳಲಾಗುತ್ತಿದೆ.

ಈ ಬಂಧಿತ ಆರೋಪಿಗಳಿಂದ ಎಸ್‌ಎಸ್‌ಎಲ್ಸಿ, ಪಿಯು, ಪದವಿ ಕಲರ್ ಪ್ರಿಂಟರ್ ಮತ್ತು ಜೆರಾಕ್ಸ್ ಮಷಿನ್ ಅಲ್ಲದೆ 7,100 ಅಂಕಪಟ್ಟಿ, 5,500 ಉತ್ತರ ಪ್ರತಿಗಳು, 25 ಅಡ್ಮಿಷನ್ ರಿಜಿಸ್ಟರ್ಗಳು ಪತ್ತೆಯಾಗಿದ್ದು, ಅವುಗಳನ್ನು ವಶಪಡಿಸಿಕೊಂಡಿದ್ದಾರೆ.

KIOS, ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಅನುಮತಿ ಪಡೆಯದೆ ಸ್ಟಡಿ ಸೆಂಟರ್ ನಡೆಸುತ್ತಿದ್ದರು.

## ಕಾಂಗ್ರೆಸ್ ಗೆ ಸೇರಿದ ಗಾಣಿಗ ಸಮಾಜದ ಮುಖಂಡರು



ಸಿಂದಗಿ (ವಿಜಯಪುರ): ರಾಜ್ಯದಲ್ಲಿ ವಿಧಾನ ಸಭಾ ಚುನಾವಣೆಯ ಕಾವು ದಿನದಿನದಿಂದ ರಂಗೇರುತ್ತಿದಂತೆ ಸಿಂದಗಿಯಲ್ಲಿಯೂ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಬಾರಿ ಪೈಪೋಟಿ ಸುರುವಾಗಿದೆ ಇತ್ತಿಚಿಗಷ್ಟೆ ಚಾಂದಕವಟೆ ಗ್ರಾಮದ ಬಿಜೆಪಿ ಮುಖಂಡರಾದ ಗಾಣಿಗ ಸಮುದಾಯದ ಪ್ರಮುಖ ನಾಯಕರಾದ ಪ್ರವೀಣ ಕಂಟಿಗೊಂಡ, ಸಂತೋಷ ಕಂಟಿಗೊಂಡ, ಧರೆಪ್ಪ ಕಂಟಿಗೊಂಡ, ರಾಕೇಶ ಕಂಟಿಗೊಂಡ, ಪರಮಾನಂದ ಕಂಟಿಗೊಂಡ, ನಾಗಪ್ಪ ಕಂಟಿಗೊಂಡ ಅವರು ಕಾಂಗ್ರೆಸ್ ಅಭ್ಯರ್ಥಿ ಅಶೋಕ ಮನಗೂಳಿ ಹಾಗೂ ಮುಖಂಡರಾದ ಬಸನಗೌಡ ಪಾಟೀಲ, ಗುರಣ್ಣಗೌಡ ಬಿರಾದಾರ, ತಮ್ಮನಗೌಡ ಪಾಟೀಲ ಇವರ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಧಿಕೃತವಾಗಿ ಸೇರ್ಪಡೆಯಾದರು,

ಈ ಸಂದರ್ಭದಲ್ಲಿ ಪ್ರವೀಣ ಕಂಟಿಗೊಂಡ ಮಾತನಾಡಿ, ಗಾಣೀಗ ಸಮೂದಾಯ ಒಂದೇ ಪಕ್ಷಕ್ಕೆ ಸಿಮಿತವಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಜೆಗಳೇ ಪ್ರಭುಗಳು ಎನ್ನುವ ಕಾಲವಿದು ಅದನ್ನು ಒಂದು ಪಕ್ಷಕ್ಕೆ ಅಂಟಿಕೊಂಡು ಅವರು ಮಾಡಿದ್ದೇ ಮಾರ್ಗ ಎನ್ನುವಂತೆ ನಡೆದುಕೊಳ್ಳುತ್ತಿದ್ದಾರೆ ಈ ಬಾರಿ ಸಿಂದಗಿಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಅಶೋಕ ಮನಗೂಳಿ ಅವರ ಪರವಾಗಿ ಕೆಲಸ ಮಾಡಿ ಅವರ ಗೆಲುವಿಗಾಗಿ ನಾವು ಪಾಲುದಾರರಾಗುತ್ತೇವೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅವರೊಂದಿಗೆ ಕಬೂಲ ಮುಲ್ಲಾ, ಮಲಕಸಾಬ ಕಣ್ಣಿ, ಅರವಿಂದ ಕಂಟಿಗೊಂಡ, ಶಂಕ್ರೆಪ್ಪ ಬಿರಾದಾರ, ದೇವಪ್ಪ ಕಂಟಿಗೊಂಡ, ಮಲ್ಲಪ್ಪ ಕಂಟಿಗೊಂಡ, ಚಾಂದಸಾಬ ಮುಲ್ಲಾ, ಯಾಸೀನ ಚಟ್ಟರಕಿ, ಪರಮಾನಂದ ಗಾಳಿ, ಯಲ್ಲಾಲಿಂಗ ಬಮ್ಮನಳ್ಳಿ, ಶಿವಯೋಗೆಪ್ಪ ಸಾಲೋಟಗಿ, ಶಿವಶಂಕರ ಸಿನ್ನೂರ, ಬಾಬು ತಳವಾರ, ಶಂಕರಗೌಡ ಪಾಟೀಲ ಸೇರಿದಂತೆ ನೂರಾರು ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಯಾದರು.

## ಬಿಜೆಪಿ ಹಠಾವೋ ಬಂಜಾರ ಬಚಾವೋ: ಬಿಜೆಪಿಗೆ ತಾಂಡಾ ಬಹಿಷ್ಕಾರ




ಸಿಂದಗಿ (ವಿಜಯಪುರ): ವಿಧಾನಸಭೆ ಸಾರ್ವತ್ರಿಕ ಚುಣಾವಣೆ 2023ರ ಘೋಷಣೆ ಯಾಗಿರುವ ಹಿನ್ನಲೆಯಲ್ಲಿ ತಾಲೂಕಿನ ಬಹುತೇಕ ತಾಂಡಾಗಳ ಮುಖ್ಯದ್ವಾರದಲ್ಲಿ ಮಿಸಲಾತಿ ಒಡೆತಕ್ಕೆ ಹಮಾರಾ ತಾಂಡೋ ಹಮಾರೆ ರಾಜ್, ಬಿಜೆಪಿ ಪಕ್ಷಕ್ಕೆ ತಾಂಡಾ ಬಹಿಷ್ಕಾರ, ಬಿಜೆಪಿ ಹಠಾವೋ ಬಂಜಾರ ಬಚಾವೋ ಎಂಬ ವಾಕ್ಯಗಳೊಳಗೊಂಡ ಬ್ಯಾನರ್‌ಗಳನ್ನು ಹಾಕುವ ಮೂಲಕ ಬಿಜೆಪಿ ಪಕ್ಷಕ್ಕೆ ಸೊಡ್ಡು ಹೊಡೆದಿವೆ.

ಹೌದು॥ ಒಳಮಿಸಲಾತಿ ಆಧಾರದ ಮೇಲೆ ಭೋವಿ, ಬಂಜಾರ, ಕೊರಚ, ಕೊರಮ ಸಮೂದಾಯಗಳು ಬಹುದಿನಗಳಿಂದ ಜಾರಿ ಮಾಡದಂತೆ ಸುಮಾರು ವರ್ಷಗಳಿಂದ ಹೊರಾಟಗಳನ್ನು ಹಮ್ಮಿಕೊಂಡಿದ್ದು ಅದನ್ನು ಪರಿಗಣನೆಗೆ ತೆಗೆದುಕೊಳ್ಳದೇ ಕೆಲ ಜಾತಿಗಳನ್ನು ಮೆಚ್ಚಿಸಿಕೊಳ್ಳಲು ಕರ್ನಾಟಕ ಬಿಜೆಪಿ ಸರಕಾರ ನ್ಯಾಯಮೂರ್ತಿ ಸದಾಶಿವ ಆಯೋಗದ ಅವೈಜ್ಞಾನಿಕ ವರದಿಯನ್ನು ಕೇಂದ್ರ ಸರಕಾರಕ್ಕೆ ಶಿಪ್ಪಾರಸ್ಸು ಮಾಡಿರುವ ಹಿನ್ನಲೆಯಲ್ಲಿ ಈ ನಾಲ್ಕು ಸಮೂದಾಯಗಳಿಗೆ ಆದ ಅನ್ಯಾಯವನ್ನು ಸರಿಪಡಿಸಿಕೊಳ್ಳಲು ಬಿಜೆಪಿ ಪಕ್ಷಕ್ಕೆ ತಕ್ಕ ಉತ್ತರ ನೀಡಲು ಇಂತಹ ನಿಧಾರಕ್ಕೆ ಕೈ ಹಾಕಿದೆ ಎಂದು ಹೇಳಲಾಗುತ್ತಿದೆ.

ಡಾ. ಅಂಬೇಡ್ಕರರು ಬರೆದ ಸಂವಿದಾನದಡಿಯಲ್ಲಿ 1956ರಲ್ಲಿ ಮೈಸೂರ ಸರಕಾರದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಅವರು ಭೋವಿ, ಬಂಜಾರ, ಕೊರಚ, ಕೊರಮ ಸಮೂದಾಯಗಳ ಮೂಲ ಕಸಬನ್ನು ಪರಿಗಣಿಸಿ ಪರಿಶಿಷ್ಟ ಜಾತಿಗಳಲ್ಲಿ ಸೇರ್ಪಡೆ ಮಾಡಿ ಆದೇಶ ಹೊರಡಿಸಿದ್ದು ಮುಂದೆ ಕರ್ನಾಟಕ ರಾಜ್ಯ ಪುನರ್ ನಾಮಕರಣವಾದ ಬಳಿಕ ಇಡೀ ರಾಜ್ಯವ್ಯಾಪಿ ಮಿಸಲಾತಿ ಪಡೆದುಕೊಳ್ಳುತ್ತ ತಮ್ಮ ಮೂಲ ಕಸಬಿನೊಂದಿಗೆ ಮಿಸಲಾತಿಯಲ್ಲಿರುವ ಎಲ್ಲ ಸಮುದಾಯಗಳು ನಮ್ಮದಿಯ ಜೀವನ ನಡೆಸುತ್ತಿದ್ದರು ಅದನ್ನು 2012ರಲ್ಲಿ ಮುಖ್ಯಮಂತ್ರಿ ಎಸ್.ಎಂ.ಕೃಷ್ಣಾ ಅವರ ಅವಧಿಯಲ್ಲಿ ಮಿಸಲಾತಿಯಲ್ಲಿ ಹೆಚ್ಚಳ ಮಾಡಬೇಕು ಎನ್ನುವ ನಿಟ್ಟಿನಲ್ಲಿ ನ್ಯಾಯಮೂರ್ತಿ ಸದಾಶಿವ ಆಯೋಗವನ್ನು ರಚಿಸಿ ಜಾತಿವಾರು ಜನಗಣತಿ ಮಾಡುವಂತೆ ನಿರ್ದೇಶನ ನೀಡಲಾಗಿತ್ತು.

ಅದನ್ನು ದುರುಪಯೋಗ ಕೊಮುವಾದಿ ಬಿಜೆಪಿ ಪಕ್ಷ ಜಾತಿ ಜಾತಿಯಲ್ಲಿ ಮಿಸಲಾತಿಯಲ್ಲಿ ಗೊಂದಲ ಸೃಷ್ಟಿಸುವ ನೆಪದಲ್ಲಿ ಛಲವಾದಿ ಸಮೂದಾಯವನ್ನು ಬಳಸಿಕೊಂಡು ಭೋವಿ, ಬಂಜಾರ, ಕೊರಚ, ಕೊರಮ ಸಂಊದಾಯ ಗಳನ್ನು ಮಿಸಲಾತಿ ಯಿಂದ ಹೊರತೆಗೆಯಬೇಕು ಎಂದು ಒಳಮಿಸಲಾತಿ ಹಕ್ಕೊತ್ತಾಯ ಮಂಡಿಸುವಂತೆ ಹೊರಾಟ ನಡೆಸಲು ಅಣಿಯಾಗಿದ್ದವು ಅದನ್ನು ವಿರೋಧಿಸುತ್ತ ಸುಮಾರು ವರ್ಷಗಳಿಂದ ನಾಲ್ಕು ಸಮೂದಾಯಗಳು ಹೊರಾಟಕ್ಕೆ ಇಳಿದಿದ್ದವು ಮಿಸಲಾತಿ ಯಾರ ಸಮ್ಮುಖದಲ್ಲಿ ನೀಡಲಾಯಿತು ಮತ್ತು ಯಾವ ಮಾನದಂಡಗಳನ್ನು ಅಳವಡಿಕೆ ಮಾಡಿದ್ದಾರೆ ಎನ್ನುವುದು.

ಪರಿಗಣೀಸದೇ ನ್ಯಾಯಮೂರ್ತಿ ಸದಾಶಿವ ಆಯೋಗದ ಅವೈಜ್ಞಾನಿಕ ವರದಿಯನ್ನು ಸಿಪ್ಪಾರಸ್ಸು ಮಾಡಿ ಕೇಂದ್ರ ಸರಕಾರಕ್ಕೆ ವರದಿ ಸಲ್ಲಿಸಿದ್ದು ಈ ನಾಲ್ಕು ಸಮೂದಾಯಗಳಿಗೆ ಮಿಸಲಾತಿಯಿಂದ ವಂಚಿತರನ್ನಾಗಿ ಮಾಡಿದ ಈ ಬಿಜೆಪಿ ಸರಕಾರವನ್ನು ಈ ರಾಜ್ಯದಲ್ಲಿ ಕಿತ್ತೋಗೆಯಬೇಕು ಎಂದು ಮಿಸಲಾತಿ ಹೋರಾಟ ಒಕ್ಕೂಟ ನೀಡಿದ ಆದೇಶದ ಮೇರೆಗೆ ಇಡೀ ರಾಜ್ಯದಲ್ಲಿ ಬಿಜೆಪಿ ಪಕ್ಷವನ್ನು ತಾಂಡಾಗಳು ಸೇರಿದಂತೆ ಮೂರು ಸಮುದಾಯಗಳು ಬಿಜೆಪಿಯನ್ನು ಬಹಿಷ್ಕರಿಸುತ್ತಿವೆ ಎನ್ನುವುದು ಸರಕಾರಕ್ಕೆ ತಿಳಿದ ವಿಷಯವಾಗಿದೆ ಎಂದು ಪ್ರಜ್ಞಾವಂತರು ಮಾತಾಡಿ ಕೊಳ್ಳುತ್ತಿರುವುದು ಸರ್ವೆ ಸಾಮಾನ್ಯವಾಗಿದೆ.

## ಛಲ ದೃಢಸಂಕಲ್ಪದ ಪ್ರತೀಕ ಭಗೀರಥ: ವಿಶ್ವಾಸ ವೈದ್ಯ



ಯರಗಟ್ಟಿ: ಸಮೀಪದ ಮುಗಳಿಹಾಳ ಗ್ರಾಮದಲ್ಲಿ ಚುನಾವಣಾ ಪ್ರಚಾರಕ್ಕೆ ಆಗಮಿಸಿದ ಕಾಂಗ್ರೆಸೆ ಅಭ್ಯರ್ಥಿ ವಿಶ್ವಾಸ ವೈದ್ಯಅವರು ಗ್ರಾಮದಲ್ಲಿ ಆಯೋಜಿಸಿದ್ದರು ಮಹರ್ಷಿ ಭಗೀರತ ಜಯಂತಿ ಕಾರ್ಯಕ್ರಮದಲ್ಲಿ ಭಗೀರತ ಪುತ್ಥಳಿಗೆ ಪುಷ್ಪಾರ್ಚನೆ ಮಾಡಿ ಮಾತನಾಡಿದರು ಲೋಕ ಕಲ್ಯಾಣಕ್ಕೆ ಗಂಗೆಯನ್ನು ಧರೆಗೆ ತರಲು ನಿರಂತರ ಶ್ರಮವಹಿಸಿ ಯಶಸ್ಸು ಪಡೆದ ಮಹಾತ್ಮ ಮಹರ್ಷಿ ಭಗೀರಥರ ಛಲ, ದೃಡ ಸಂಕಲ್ಪದ ಪ್ರತೀಕ ಎಂದು ಕಾಂಗ್ರೆಸ್ ಅಭ್ಯರ್ಥಿ ವಿಶ್ವಾಸ್ ವೈದ್ಯಹೇಳಿದರು.

ಸಮೀಪದ ಮುಗಳಿಹಾಳ ಗ್ರಾಮದಲ್ಲಿ ಭಗೀರಥ ಜಯಂತ್ಯೋತ್ಸವದ ಅಂಗವಾಗಿ ಭಗೀರಥ ಭಾವಚಿತ್ರದ ಮೆರವಣಿಗೆಯಲ್ಲಿ ಭಾಗವಹಿಸಿ, ಭಗೀರಥ ಸರ್ಕಲನಲ್ಲಿ ಮೂರ್ತಿಗೆ ಪುಷ್ಪ ಮಾಲೆ ಹಾಕಿ ನಮನಸಲ್ಲಿಸಿ, ಭಗೀರಥನ ಪ್ರಯತ್ನದಂತೆ ನಾವೆಲ್ಲ ಕೆಲಸ ಮಾಡಬೇಕು, ಅದಕ್ಕೆ ಅವರ ಸ್ಪೂರ್ತಿ ಹೊಂದಬೇಕು ಎಂದರು.

ಉಪ್ಪಾರ ಸಮಾಜದ ತಾಲೂಕಾ ಮುಖಂಡ ಬಸವರಾಜ ಆಯಟ್ಟಿ ಮಾತನಾಡಿ, ಭಗೀರಥರ ಪ್ರಯತ್ನದಂತೆ ಇಂದು ಪ್ರತಿಯೊಬ್ಬರು ಆರ್ಥಿಕವಾಗಿ, ಸಮಾಜೀಕವಾಗಿ, ಶೈಕ್ಷಣಿಕವಾಗಿ ಮುಂದೆ ಬರಬೇಕು ತಾಲೂಕಿನಲ್ಲಿ ಒಕ್ಕಟ್ಟು ಪ್ರದರ್ಶನ ಮಾಡಬೇಕಾಗಿದೆ ಎಂದರು.

ಈ ಸಂಧರ್ಭದಲ್ಲಿ ಉಮೇಶ ಬಾಳಿ, ಶಂಕರ ಇಟ್ನಾಳ, ಬಂಗಾರಪ್ಪ ಹರಳಿ, ಪ್ರಕಾಶ ವಾಲಿ, ಮುತ್ತೇಪ್ಪ ಅಣ್ಣಿಗೇರಿ, ಮಾರುತಿ ಭಂಡ್ರೋಳ್ಳಿ, ಮಹಾಂತೇಶ ತಪಸಿ, ಪಂಚಾಕ್ಷರಿ ಪಟ್ಟಣಶೆಟ್ಟಿ, ಲಕ್ಷ್ಮಣ ದಳವಾಯಿ, ರಾಮಣ್ಣಾ ದಳವಾಯಿ, ಮಾರುತಿ ಕಡಕೋಳ,ಗೋವಿಂದಪ್ಪ ಮುರಗಟ್ಟಿ, ವಿಠ್ಠಲ ದಳವಾಯಿ, ವಿಠ್ಠಲ ತೊರಣಗಟ್ಟಿ, ಹನಮಂತ ಕಡಕೋಳ, ಕೃಷ್ಣಾ ಕಂಕನವಾಡಿ, ಪರಸು ಕತ್ತಿ, ಸೇರಿದಂತೆ ಸಮಾಜದ ಹಿರಿಯರು, ಯುವಕರು ಮತ್ತಿತರರು ಭಾಗವಹಿಸಿದ್ದರು.

## ಕಾಂಗ್ರೇಸ್ ಸರ್ಕಾರ ಅಧಿಕಾರಿ ಚುಕಾಣಿ ಹಿಡಿಯುವುದು ನಿಶ್ಚಿತ



ಹುಕ್ಕೇರಿ: ಸ್ಥಳೀಯ, ರಾಜ್ಯ ಹಾಗೂ ದೇಶದಲ್ಲಿಯ ಆಡಳಿತ ಸರ್ಕಾರದ ದುರಾಡಳಿತದಿಂದ ಜನರು ಬದಲಾವಣೆ ಬಯಸಿದ್ದಾರೆ. ಇದರಿಂದ ಕಾಂಗ್ರೆಸ್ ಸರ್ಕಾರ ಅಧಿಕಾರಿ ಚುಕಾಣಿ ಹಿಡಿಯುವುದು ನಿಶ್ಚಿತ ಎಂದು ಮಾಜಿ ಸಚಿವ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಎ.ಬಿ ಪಾಟೀಲ ಹೇಳಿದರು.

ಅವರು ಪಟ್ಟಣದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಯಾವುದೇ ನೀರಾವರಿ ಹಾಗೂ ಹೊಸ ಯೋಜನೆಗಳಿಲ್ಲದೆ ಅಭಿವೃದ್ದಿಯಾಗಿದೆ 5.50 ಕೋಟಿ ಸಾಲ ಮಾಡಿದೆ. ದಬಾರಿ ಬೆಲೆಯಿಂದ ಸಾಮಾನ್ಯಜನರ ಬದುಕು ದುಸ್ತರವಾಗಿದೆ.

ಕತ್ತಿ ಕುಟುಂಬದ ದುರಾಡಳಿತ: ತಾಲೂಕಿನಲ್ಲಿಕತ್ತಿ ಸಹೋದರರುಜನರ ಮೇಲೆ ದಬ್ಬಾಳಿಕೆ ಹಾಗೂ ಸರ್ವಾಧಿಕಾರಿಯಿಂದ ಬ್ರಷ್ಟಾಚಾರದಿಂದಜನತೆ ನೊಂದಿದ್ದಾರೆ. ಸಂಕೇಶ್ವರ ಸಕ್ಕರೆ, ಬಿಡಿಸಿಸಿ ಬ್ಯಾಂಕ ಮೂಲಕ ಕೋಟ್ಯಾಂತರರೂ ಲೂಟಿ ಮಾಡಿದ್ದಾರೆ. ಅಲ್ಲದೆ ತಾಲೂಕಿನ ಕಬ್ಬು ಬೆಳಗಾರರ ಕಬ್ಬನ್ನುತೂಕದಲ್ಲಿ ಮೋಸಮಾಡಿ ದಿನಕ್ಕೆ 1 ಕೋಟಿ 50 ಬಾಗೇವಾಡಿ ಖಾಜಾನೆ ತುಂಬಿ ಕೊಂಡಿದ್ದಾರೆ. ಹಿರಣ್ಯಕೇಶಿ ಸಕ್ಕರೆ ಕಾರ್ಖಾನೆಗೆ 20 ವರ್ಷದಿಂದ ಬಣ್ಣ ಹಚ್ಚಿಲ್ಲ ಹಾಗೂ ಕಳೆದ 5 ತಿಂಗಳಿನಿಂದ ನೌಕರರಿಗೆ ವೇತನ ನೀಡಿಲ್ಲ. ಕಾರ್ಖಾನೆ ದಿವಾಳಿ ಅಂಚಿನಲ್ಲಿದೆ ಕ್ಷೇತ್ರದಲ್ಲಿ ಹಳ್ಳಿಗಳಲ್ಲಿ ಕುಡಿಯುವ ನೀರಿಗಾಗಿಜಲ ಕುಂಬದಹಣ ಲೂಟಿ ಮಾಡಿದ್ದಾರೆ ಎಂದು ಆರೋಪಿಸಿದರು.

ಮಾಜಿ ಸಚಿವ ಶಶಿಕಾಂತ ನಾಯಿಕ ಮಾತನಾಡಿಕತ್ತಿ ಸಹೋದರರ ಪಕ್ಷದಲ್ಲಿ ಇದ್ದುಕೊಂಡು ಅವರ ಅವ್ಯವಹಾರ ಬಯಲು ಮಾಡಲು ಸಾಧ್ಯವಾಗದೆ ಇರುವುದರಿಂದ ಕಾಂಗ್ರೆಸ್ ಪಕ್ಷದಲ್ಲಿ ಸೇರಿಕೊಂಡು ಅವರ ಅವ್ಯವಹಾರ ಮತದಾರರ ಮುಂದೆ ಬಿಚ್ಚಿಡುತ್ತಿದೇನೆ, ಮತದಾರರು ಬದಲಾವಣೆ ಬಯಸಿದ್ದಾರೆ, ಈ ಭಾರಿಕ್ಷೇತ್ರದಲ್ಲಿ ಕಾಂಗ್ರೆಸ್‌ಅಧಿಕಾರಿ ಹಿಡಿಯುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿದರು.

## ಕಳಸಾರೋಹಣ ಸಮಾರಂಭ: ನಿಖಿಲ್ ಉಮೇಶ್ ಕತ್ತಿ ಭಾಗಿ



ಹುಕ್ಕೇರಿ: ಹುಕ್ಕೇರಿ ತಾಲೂಕಿನ ಕೋಟಬಾಗಿ ಗ್ರಾಮದ ಸಂಗಮೇಶ್ವರ್ ನಗರ್ ಕರೆಮ್ಮಾ ದೇವಿ ಹಾಗೂ ಬ್ರಹ್ಮ ದೇವರ ಮೂರ್ತಿ ಸ್ಥಾಪನೆ ಹಾಗೂ ಕಳಸಾರೋಹಣ ಸಮಾರಂಭದಲ್ಲಿ ನಿಖಿಲ್ ಉಮೇಶ್ ಕತ್ತಿ ಅವರು ಸಮಾರಂಭದಲ್ಲಿ ಭಾಗಿಯಾಗಿದ್ದರು.

ಹಾಗೂ ಬಸವರಾಜ್ ಮರಡಿ, ಚಂದ್ರಕಾಂತ್ ಚೌಗಲಾ, ಅರ್ಜುನ್ ಚೌಗಲಾ, ಶಂಕರ್ ಕೋಚರಿ, ಆನಂದ್ ಖಾನಾಪುರಿ, ಶಿವಪ್ಪಾ ಮುತ್ನಾಳಿ, ರಾಜು ಕೋಚರಿ, ಕಲ್ಲಪಾ ಮುತ್ನಾಳಿ, ಬಸಪ್ಪಾ ಚೌಗಲಾ, ಮಲ್ಲಪ್ಪಾ ಜಾಗನೂರಿ ಬಸಗೌಡ ದೇಸಾಯಿ ಹಾಗೂ ಅನೇಕ ಗಣ್ಯಮಾನ್ಯರು ಉಪಸ್ಥಿತರಿದ್ದರು.

ಶಿರಗಾಂವಿ ಗ್ರಾಮದಿಂದ ಕಿಲೋಮೀಟರಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತಾಧಿಗಳು ಹಾಗೂ ಗ್ರಾಮಸ್ಥರು ಕೂಡಿಕೊಂಡು ಅದ್ದೂರಿಯಾಗಿ ವಾಧ್ಯಮೇಳದೊಂದಿಗೆ ಮಹಿಳೆಯರ ಆರತಿ ಪಲ್ಲಕ್ಕಿ ಉತ್ಸವ ಹೀಗೆ ಹಲವಾರು ಪ್ರಮುಖ ಮುಖಂಡರು ಸ್ವಾಮಿಜಿಗಳ ನೆತ್ರತ್ವದಲ್ಲಿ ಕರೆಮ್ಮಾ ದೇವಿ ಹಾಗೂ ಬ್ರಹ್ಮದೇವರ ಗುಡಿಗಳಿಗೆ ಕಳಸಾರೋಹಣ ಮಾಡಿ ಜಾತ್ರೆಯನ್ನ ವಿಶಷ್ಟವಾಗಿ ಆಚರಣೆ ಮಾಡಿದರು.

## ಲೋಕಾಯುಕ್ತ ಬಲೆಗೆ ಬಿದ್ದ ಗ್ರಾಪಂ ಕಂಪ್ಯೂಟರ್ ಆಪರೇಟರ್

ಕೊಪ್ಪಳ: ಗ್ರಾಮ ಪಂಚಾಯತ್ ಕಾರ್ಯಾಲಯದ ಕಂಪ್ಯೂಟರ್ ಆಪರೇಟರ್ ವಿಠ್ಠಲ್ ತಂದೆ ವೀರಣ್ಣಶೆಟ್ಟಿ ಅವರು ಲಂಚದ ಹಣ 15,000 ಪಡೆಯುವಾಗ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಮನೆ ಸ್ವತ್ತಿಗೆ ನಮೂನೆ 9 ನೀಡಲು ಕುಕನೂರು ತಾಲೂಕಿನ ನೆಲಜೇರಿ ಗ್ರಾಪಂ ಪಿಡಿಓ ಆನಂದ ಎಲಿಗಾರ ಅವರ ಸೂಚನೆಯಂತೆ ಕಂಪ್ಯೂಟರ್ ಆಪರೇಟರ್ ವಿಠ್ಠಲ್ ತಂದೆ ವೀರಣ್ಣಶೆಟ್ಟಿ ಅವರು 20 ಸಾವಿರ ರೂ. ಲಂಚದ ಹಣಕ್ಕೆ ಬೇಡಿಕೆ ಇಟ್ಟಿದ್ದು, ಚೌಕಾಸಿ ನಂತರ 15 ಸಾವಿರ ಲಂಚದ ಹಣಕ್ಕೆ ಒಪ್ಪಿಕೊಂಡು ಕುದರಿಮೋತಿ ಗ್ರಾಪಂ ಕಾರ್ಯಾಲಯದಲ್ಲಿ ದೂರುದಾರರಿಂದ ಲಂಚದ ಹಣ ಪಡೆದುಕೊಂಡು ಟ್ರಾಪ್‌ಗೆ ಒಳಗಾಗಿದ್ದಾರೆ.

ರಾಯಚೂರಿನ ಕರ್ನಾಟಕ ಲೋಕಾಯುಕ್ತ ಪೊಲೀಸ್ ಅಧೀಕ್ಷಕರ ಮಾರ್ಗದರ್ಶನದಲ್ಲಿ ಕೊಪ್ಪಳ ಲೋಕಾಯುಕ್ತ ಅಧಿಕಾರಿಗಳು ಹಾಗೂ ಸಿಬ್ಬಂದಿಯು ಪ್ರಕರಣವನ್ನು ಭೇದಿಸಿರುತ್ತಾರೆ. ಈ ಬಗ್ಗೆ ಕೊಪ್ಪಳ ಲೋಕಾಯುಕ್ತ ಠಾಣೆಯಲ್ಲಿ ಗುನ್ನೆ ನಂ. 04/2023 ರಲ್ಲಿ ಪ್ರಕರಣ ದಾಖಲಿಸಿ, ಆರೋಪಿಯನ್ನು ಬಂಧಿಸಿದ್ದು, ತನಿಖೆ ಮುಂದುವರೆದಿದೆ ಎಂದು ಕರ್ನಾಟಕ ಲೋಕಾಯುಕ್ತ ರಾಯಚೂರು ಪೊಲೀಸ್ ಅಧೀಕ್ಷಕರ ಕಚೇರಿಯ ಪ್ರಕಟಣೆ ತಿಳಿಸಿದೆ.

# ಮಾನಸಿಕ ಸ್ಥಿಮಿತ ಕಳೆದುಕೊಂಡ ಅಮಿತ್ ಶಾ: ಸುಧಾಮದಾಸ್ ಟೀಕೆ



ಬೆಳಗಾವಿ: ಕೇಂದ್ರ ಗೃಹ ಸಚಿವ ಅಮಿತ್ ಶಾ ಎ. 25 ರಂದು ವಿಜಯಪುರಲ್ಲಿ ಹಮ್ಮಿಕೊಂಡಿದ್ದ ಚುನಾವಣಾ ಪ್ರಚಾರದಲ್ಲಿ ಮಾತನಾಡಿ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಕೋಮುಗಲಭೆಯಾಗುತ್ತದೆ ಎಂದು ಹೇಳಿಕೆ ನೀಡಿ ರಾಜ್ಯದ ಜನತೆ ಕುರಿತು ದ್ವೇಷ ಭಾವನೆ ಹುಟ್ಟಿಸುತ್ತಿದ್ದಾರೆ ಎಂದು ಕೆಪಿಸಿಸಿ ಪ್ರಚಾರ ಸಮಿತಿ ಉಪಾಧ್ಯಕ್ಷ ಸುಧಾಮದಾಸ್ ಟೀಕಿಸಿದರು.

ನಗರದ ಕಾಂಗ್ರೆಸ್ ಭವನದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜಕೀಯದಲ್ಲಿ ರಾಜ ಧರ್ಮ ಪ್ರತಿಪಾಧಿಸುತ್ತಿದ್ದ ಅಟಲ್ ಬಿಹಾರಿ ವಾಜಪೇಯಿಂತವರು ಕಾಲದಲ್ಲಿ ಇದ್ದ ಬಿಜೆಪಿ ಈಗಿಲ್ಲ, ಆಡಳಿತದ ಎಲ್ಲಾ ಹಂತದಲ್ಲೂ ದ್ವೇಷ ಭಾವನೆ ಬಿತ್ತುವ ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದ ಬಿಜೆಪಿ ಸರ್ಕಾರ ಅಧಿಕಾರದಲ್ಲಿದ್ದು, ಸೋಲನ್ನು ಗ್ರಹಿಸಿರುವ ಅಮಿತ್ ಶಾ ಮಾನಸಿಕ ಸ್ಥಿಮಿತ ಕಳೆದುಕೊಂಡಿದ್ದಾರೆ ಆಕ್ರೋಶ ವ್ಯಕ್ತಪಡಿಸಿದರು.

ಬಾಗಲಕೋಟೆಯಲ್ಲಿ ನಾಲ್ಕು ಜನ ಅಭ್ಯರ್ಥಿಗಳನ್ನು ಸೇರಿಸಿಕೊಂಡು, ಕರ್ನಾಟಕವನ್ನು ಮೋದಿಯವ-ರಿಗೆ ಒಪ್ಪಿಸಲು ಮತ ನೀಡಿ ಅಂತ ಹೇಳುತ್ತಿದ್ದಾರೆ, ಪ್ರಚಾರ ಸಮಯದಲ್ಲಿ ಶಿಷ್ಟಾಚಾರ ಗಾಳಿಗೆ ತೂರಲಾಗುತ್ತಿದೆ. ಬೇಜವಾಬ್ದಾರಿ ಹೇಳಿಕೆಗಳು ಮಿತಿ ಮೀರಿವೆ ಎಂದ ಅವರು, ಜಗದೀಶ ಶೆಟ್ಟರ್ ಅವರು ಕೇವಲ ಆತ್ಮಗೌರವದ ವಿಷಯ ಮುಂದಿಟ್ಟುಕೊಂಡು ಬಿಜೆಪಿ ದಿಕ್ಕರಿಸಿ ಕಾಂಗ್ರೆಸ್ ಸೇರಿದ್ದಾರೆ, ಅವರಿಗೆ ತಮ್ಮ ರಾಜಕೀಯ ಜೀವನ ನಿಷ್ಕಳಂಕ ಎನ್ನುವುದನ್ನು ಸಾಬೀತು ಮಾಡಬೇಕಿದೆ ಎಂದರು.

ಯಾರಾದರೂ ಬಿಜೆಪಿಯವರ ಆದ-ೀಶ ಮೀರಿದರೆ ಸಿಬಿಐ, ಐಟಿಯನ್ನು ಬಳಸಿಕೊಳ್ಳಲಾಗುತ್ತಿದೆ, ಅಕ್ಟೋಬರ್ 6 ರಂದು ಯಡಿಯೂರಪ್ಪಗೆ ಸಂಬಂಧಿಸಿದವರ 30 ಕಡೆ ದಾಳಿ ನಡೆಸಿದ್ದಾರೆ, ಆ ಮೂಲಕ ಯಡಿಯೂರಪ್ಪ ಹಾಗೂ ಅವರ ಮಗನನ್ನು ಹಿಡಿದಿಟ್ಟುಕೊಂಡಿದ್ದಾರೆ, ಆದಾಯ ತೆರಿಗೆ ಇಲಾಖೆಯಲ್ಲಿ ಯಡಿಯೂರಪ್ಪನವರ ಸಮಸ್ತ ದೌರ್ಬಲ್ಯ ಇದೆ, ಅಮಿತ್ ಶಾ ಒತ್ತಡಕ್ಕೆ ಒಳಗಾಗಿ ಯಡಿಯೂರಪ್ಪ ಶೆಟ್ಟರ್ ವಿರುದ್ಧ ಮಾತಾಡ್ತಿದ್ದಾರೆ ಎಂದು ಹೇಳಿದರು.

2022-23 ರಲ್ಲಿ ಕರ್ನಾಟಕದಿಂದ ಜಿಎಸ್‌ಟಿ ಪಾವತಿ ಆಗಿದ್ದು 3 ಲಕ್ಷ 72 ಕೋಟಿ ರೂಪಾಯಿ, ಗುಜರಾತದಿಂದ 1 ಲಕ್ಷ 93 ಸಾವಿರ ಕೋಟಿ, ಉತ್ತರ ಪ್ರದೇಶದಿಂದ 1 ಲಕ್ಷ 33 ಸಾವಿರ ಕೋಟಿ ರೂಪಾಯಿ, 3 ಲಕ್ಷ 72 ಸಾವಿರ ಕೋಟಿ ಪಾವತಿ ಮಾಡಿದ ಕರ್ನಾಟಕಕ್ಕೆ 50 ಸಾವಿರ ಕೋಟಿ ರೂಪಾಯಿ, ಉತ್ತರ ಪ್ರದೇಶದಲ್ಲಿ ಪಾವತಿ ಕಮ್ಮಿಯಾಗಿದ್ದರು ಯೋಜನೆಗಳ ಮೂಲಕ 2 ಲಕ್ಷ 90 ಸಾವಿರ ಕೋಟಿ ನೀಡಲಾಗಿದೆ, ಕರ್ನಾಟಕಕ್ಕೆ ಈ ಡಬಲ್ ಇಂಜಿನ್ ಸರ್ಕಾರ ಮೋಸ ಮಾಡ್ತಿದೆ, ಗೃಹ ಯೋಜನೆಗೆ ಸಂಬಂಧಿಸಿದಂತೆ ಗ್ರಾಮ ಸಡಕ್ ಯೋಜನೆಯಲ್ಲಿ 3 ಲಕ್ಷ 700 ಮನೆಗಳು, ಸಹಾಯ ಧನ ಸಿಕ್ಕಿದ್ದು 1 ಲಕ್ಷ ಮನೆಗೆ, ಗುಜರಾತ್ ನಲ್ಲಿ 4 ಲಕ್ಷ ಮನೆಗೆ 3 ಲಕ್ಷ 99 ಸಾವಿರ ಮನೆಗಳಿಗೆ ಸಹಾಯ ಧನ ಸಿಕ್ಕಿದೆ, ಎರಡು ಲಕ್ಷ ಕೋಟಿ ನಮಗೆ ಅನುದಾನ ನೀಡಬೇಕುತ್ತು, ಆದರೆ ಕೇವಲ 37 ಸಾವಿರ ಕೋಟಿ ಮಾತ್ರ ನೀಡಲಾಗಿದೆ ಎಂದು ತಿಳಿಸಿದರು.

ರಾಜ್ಯ, ಕೇಂದ್ರ ಸರ್ಕಾರಗಳು ಸುಳ್ಳಿನ ಆಧಾರದ ಮೇಲೆ ಅಧಿಕಾರ ನಡೆಸುತ್ತಿವೆ, ಒಳ ಮೀಸಲಾತಿ ಆದೇಶ ಆಗಿದಿದ್ದರೂ ಸಹ ಶಿಪಾರಸ್ಸು ಮಾಡಿರುವ ಬಗ್ಗೆ ಘೋಷಣೆ ಮಾಡಿದ್ದಾರೆ, ಅದು ಜಾರಿ ಆಗಿದೆ ಎನ್ನುವ ರೀತಿಯಲ್ಲಿ ಬಿಂಬನೆ ಮಾಡಲಾಗ್ತಿದೆ, ದೀನ ದಯಾಳ್ ಉಪಾದ್ಯೆಯರ ಹೆಸರನ್ನ ಒಳಮೀಸಲಾತಿಗೆ ಇಡಲಾಗಿದೆ, ಸದಾಶಿವ ಆಯೋಗದ ವರದಿ ಜಾರಿ ಆಗಿಲ್ಲ. ಆಗೋದು ಇಲ್ಲ, 9 ಶೆಡ್ಯೂಲ್ಗೆ ಸೇರದ ಹೊರತು ಇದನ್ನ ಜಾರಿಗೊಳಿಸಲು ಅವಕಾಶ ಇರುವುದಿಲ್ಲ, ಬಿಜೆಪಿಯವರು ಒಳ ಮೀಸಲಾತಿ ಜಾರಿಗೊಳಿಸಿದ್ದೇವೆ ಎಂದು ಹೇಳುತ್ತಿದ್ದಾರೆ, ಇದು ದಲಿತ-ರಿಗೆ ಮಾಡುತ್ತಿರುವ ಮಹಾ ವಂಚನೆ. ಕಾರಣ ಎಲ್ಲರಲ್ಲಿ ಜಾಗೃತಿಗೊಳಿಸಬೇಕಿದೆ ಎಂದರು.

ಕರ್ನಾಟಕ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲಿದೆ, ಲಕ್ಷ ಕೋಟಿ ಆಯವ್ಯದಲ್ಲಿ 77 ಸಾವಿರ ಕೋಟಿ ಸಾಲ ಅಂತ ತೋರಿಸಲಾಗಿದೆ.

ಅದರಲ್ಲಿ 40 ಪರ್ಸಂಟ್ ಕಮಿಷನ್ ಸಹ ಅದರಲ್ಲಿಯೇ ತೋರಿಸಲಾಗುತ್ತಿದೆ, ರಾಜ್ಯಕ್ಕೆ ಪ್ರವಾಹ ಬಂದಾಗ ಮೋದಿ ಬರ್ಲಿಲ್ಲ, ಭ್ರಷ್ಟಾಚಾರ ನಡೆದು 40 % ಆರೋಪ ಇದ್ದರೂ ಸಹ ಒಂದು ಬಾರಿಯೂ ಕೇಳಲಿಲ್ಲ,

ತೆರಿಗೆ ಹಣದಲ್ಲಿಯೇ ಅವರು ಚುನಾವಣೆ ಮಾಡುತ್ತಿದ್ದಾರೆ, ನಮ್ಮ ಯೋಜನೆಗಳು ಮೋದಿಯವರು 15 ಲಕ್ಷ ಹಣವನ್ನು ಅಕೌಂಟಿಗೆ ಹಾಕ್ತಿವಿ ಅಂತ ಹೇಳಿದ ಹಾಗಲ್ಲ ಎಂದು ಟಾಂಗ್ ನೀಡಿದರು. ಈ ಸಂದರ್ಭದಲ್ಲಿ ಕೆಪಿಸಿಸಿ ಪ್ರಚಾರ ಸಮಿತಿಯ ಬಿ. ಗೋಪಾಲ್ ಸೇ-ರಿದಂತೆ ಜಿಲ್ಲೆಯ ಕಾಂಗ್ರೆಸ್ ಮುಖಂಡರು ಇದ್ದರು.

## ಯಮಕನಮರಡಿಯಲ್ಲಿ ಕಮಲ ಅರಳಿಸಲು ಪಣತೊಟ್ಟ ಬಸವರಾಜ ಹುಂದ್ರಿ



ಬೆಳಗಾವಿ: ಭಾರತೀಯ ಜನತಾ ಪಕ್ಷ ಯಮಕನಮರಡಿ ಮತಕ್ಷೇತ್ರವನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳಲು ಶಥಾಯ ಘತಾಯ ಪ್ರಯತ್ನ ಮಾಡುತ್ತಿದೆ.

ಯಮಕನಮರಡಿಯನ್ನು ತನ್ನ ಪ್ರತಿಷ್ಠೆಯನ್ನಾಗಿಸಿಕೊಂಡ ಬಿಜೆಪಿಯು ಈ ಕ್ಷೇತ್ರಕ್ಕೆ ಅಳಿದು ತೂಗಿ ಬಸವರಾಜ್ ಹುಂದ್ರಿ ಅವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ಸಿನ ಭದ್ರಕೋಟೆಯಾಗಿರುವ ಈ ಕ್ಷೇತ್ರದಲ್ಲಿ ರಾಜ್ಯದ ಪ್ರಭಾವಿ ನಾಯಕ ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಕಾಂಗ್ರೆಸ್ ಪಕ್ಷದಿಂದ ಪ್ರತಿನಿಧಿಸುತ್ತಿದ್ದಾರೆ. ಬಿಜೆಪಿ ಪ್ರತಿ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಪೈಪೋಟಿ ನೀಡುತ್ತಾ ಬಂದಿದೆ. ಈ ಸಲ ಗೆಲವು ನಮ್ಮದೇ ,ಎನ್ನುವ ಬಿಜೆಪಿ ಅಭ್ಯರ್ಥಿ ಬಸವರಾಜ್ ಹುಂದ್ರಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆಗಳು ಜನಪರ ಕಾರ್ಯಕ್ರಮಗಳು ಕಟ್ಟ ಕಡೆಯ ವ್ಯಕ್ತಿಗೆ ತಲುಪುತ್ತಿರುವುದರಿಂದ ಭಾರತೀಯ ಜನತಾ ಪಕ್ಷ ಜನ ಆಶೀರ್ವಾದ ಮಾಡಲಿದ್ದಾರೆ.

ಜನ ಭಾರತೀಯ ಜನತಾ ಪಕ್ಷಕ್ಕೆ ಮತ ನೀಡಲಿದ್ದಾರೆ ಎಂದು ಭಾರತೀಯ ಜನತಾ ಪಕ್ಷದ ಯಮಕನಮರಡಿ ಕ್ಷೇತ್ರದ ಅಭ್ಯರ್ಥಿ ಬಸವರಾಜ್ ಹುಂದ್ರಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಹೇಳಿದರು.

## ಹಣ ಬಲವೋ, ಜನ ಬಲವೋ ಫಲಿತಾಂಶ ನಿರ್ಧರಿಸಲಿದೆ



ಹುಳಿಯಾರು: ಈ ಬಾರಿ ಚಿಕ್ಕನಾಯಕನಹಳ್ಳಿ ಕ್ಷೇತ್ರದಲ್ಲಿ ಚುನಾವಣೆ ಹಣ ಬಲ ಹಾಗೂ ಜನ ಬಲದ ನಡುವೆ ನಡೆಯಲಿದ್ದು, ಯಾರ ಕೈ ಮೇಲಾಗುತ್ತದೆ ಎಂಬುದನ್ನು ಫಲಿತಾಂಶ ನಿರ್ಧ-ರಿಸಲಿದೆ ಎಂದು ಜೆಡಿಎಸ್ ಅಭ್ಯರ್ಥಿ ಸಿ.ಬಿ.ಸುರೇಶ್‌ಬಾಬು ತಿಳಿಸಿದರು.

ಕಂದಿಕೆರೆ ಹೋಬಳಿಯಲ್ಲಿಯಲ್ಲಿ ಮತಯಾಚನೆ ಮಾಡಿ ಅವರು ಮಾತನಾಡಿದರು.ಎರಡೂ ರಾಷ್ಟ್ರೀಯ ಪಕ್ಷಗಳ ಅಭ್ಯಾರ್ಥಿಗಳು ಕ್ಷೇತ್ರದಲ್ಲಿ ಹಣದ ಹೊಳೆ ಹರಿಸುತ್ತಿದ್ದಾರೆ. ಆದರೂ ನಾನು ಪ್ರಚಾರಕ್ಕೆ ತೆರಳುವ ಸಂದರ್ಭದಲ್ಲಿ ಚುನಾವಣಾ ವೆಚ್ಚಕ್ಕಾಗಿ ಜನರೇ ನನಗೆ ಧನ ಸಹಾಯ ಮಾಡುತ್ತಿದ್ದಾರೆ. ಕಳೆದ 5 ವರ್ಷಗಳಿಂದ ಯಾವುದೇ ಅಧಿಕಾರವಿಲ್ಲದಿದ್ದರೂ ಕ್ಷೇತ್ರದ ಜನರ ಜೊತೆಗಿದ್ದೇನೆ. ಹೀಗಾಗಿ ಈ ಬಾರಿ ಹಳ್ಳಿಹಳ್ಳಿಗಳಲ್ಲಿ ಜನರು ಚುನಾವಣೆ ಸ್ಪರ್ಧೆಗೆ ಸ್ವಯಂಪ್ರೇರಿತರಾಗಿ ನನಗೆ ಹಣ ನೀಡುತ್ತಿದ್ದಾರೆ. ಜನರ ಈ ಪ್ರೀತಿ ವಿಶ್ವಾಸ ಮರೆಯಲು ಎಂದಿಗೂ ಸಾದ್ಯವಿಲ್ಲ ಎಂದರು. ಡಿಸಿಸಿ ಬ್ಯಾಂಕ್ ನಿರ್ದೇಶಕ ಸಿಂಗದಹಳ್ಳಿ ರಾಜಕುಮಾರ್ ಮಾತನಾಡಿ ಕುಮಾರಸ್ವಾಮಿ ಅವರ ಶ್ರಮ ಹಾಗೂ ದೇವೇಗೌಡರ ಆಶೀರ್ವಾದದಿಂದ ಈ ಬಾರಿ ರಾಜ್ಯದಲ್ಲಿ ಜೆಡಿಎಸ್ ಅಧಿಕಾರಕ್ಕೆ ಬರುವುದು ನಿಶ್ಚಿತ. ಹಾಗೆಯೇ ಸುರೇಶ್‌ಬಾಬು ಸಚಿವರಾಗುವುದು ಗ್ಯಾರೆಂಟಿ ಎಂದರಲ್ಲದೆ ಪ್ರಾದೇಶಿಕ ಪಕ್ಷಗಳು ಅಧಿಕಾರಕ್ಕೆ ಬಂದಲ್ಲಿ ರಾಜ್ಯಗಳು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಈ ಬಾರಿ ಗೆಲ್ಲಿಸಿದರೆ ಸಚಿವರಾಗಿ ತಾಲ್ಲೂಕು ಇನ್ನೂ ಅಭಿವೃದ್ಧಿ ಹೊಂದಲು ಶ್ರಮಿಸುತ್ತಾರೆ ಎಂದರು.

## ಜೆಡಿಎಸ್ ಅಚ್ಚರಿ ಫಲಿತಾಂಶ ನೀಡಲಿದೆ: ಬಸವರಾಜ ಪಾಟೀಲ



ಹುಕ್ಕೇರಿ : ಕ್ಷೇತ್ರದ ಮತದಾರರು ಬಿಜೆಪಿ ಮತ್ತು ಕಾಂಗ್ರೆಸ್‌ನ ವಂಶಾಡಳಿತಕ್ಕೆ ಭ್ರಮನಿರಶನ ಗೊಂಡಿದ್ದಾರೆ.

ಈ ಚುನಾವಣೆಯಲ್ಲಿ ಜೆಡಿಎಸ್ ಅಚ್ಚರಿ ಫಲಿತಾಂಶ ನೀಡಲಿದೆ ಎಂದು ಜೆಡಿಎಸ್ ಅಭ್ಯರ್ಥಿ ಬಸವರಾಜ ಪಾಟೀಲ ಹೇಳಿದರು.


ಪಟ್ಟಣದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸೋಲುವ ಭಯದಿಂದ ಹತಾಸೆಗೊಂಡ ಕಾಂಗ್ರೆಸ್ ಮುಖಂಡರು ತಮ್ಮ ಬಗ್ಗೆ ಇಲ್ಲ ಸಲ್ಲದ ಆರೋಪಗಳನ್ನು ಮಾಡುತ್ತಿದ್ದಾರೆ ಎಂದರು.

ಚುನಾವಣಾ ಪ್ರಚಾರಾರ್ಥ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ, ಪಕ್ಷದ ಅಧ್ಯಕ್ಷ ಸಿ.ಎಂ.ಇಬ್ರಾಹಿಂ ಹುಕ್ಕೇ-ರಿಯಲ್ಲಿ ರೋಡ ಶೋ ನಡೆಸಲಿದ್ದಾರೆ. ಜೆಡಿಎಸ್ ಈ ಬಾರಿ ಜಿಲ್ಲೆಯಲ್ಲಿ ಖಾತೆ ತೆರೆಯಲಿದ್ದು ಸವದತ್ತಿ, ರಾಯಬಾಗ, ಯಮಕನಮರಡಿ ಅಭ್ಯರ್ಥಿಗಳ ಜಯ ಖಚಿತ ಎಂದು ಅವರು ಹೇಳಿದರು.

ಸೋಲುವ ಭಯದಿಂದ ಹತಾಸೆಗೊಂಡ ಕಾಂಗ್ರೆಸ್ ಮುಖಂಡರು ಚುನಾವಣೆಯ ಸ್ಪರ್ಧಾ ಕಣದಿಂದ ನಿವೃತ್ತಿ ಘೋಷಿಸುವಂತೆ ತಮಗೆ ಮಾನಸಿಕ ಹಿಂಸೆ, ಒತ್ತಡ ಹೇರುತ್ತಿದ್ದಾರೆ. ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಸಂತೋಷ ಮುಡಸಿ, ವಿಜಯ ರವದಿ, ಪ್ರಚಾರ ಸಮಿತಿ ಜಿಲ್ಲಾ ಅಧ್ಯಕ್ಷ ಮಲ್ಲಿಕಾರ್ಜುನ ರಾಶಿಂಗೆ, ಮುಖಂಡ ಮಹಾಂತೇಶ ಗುಮಚಿ ಅವ್ಯಾಚ ಶಬ್ದಗಳಿಂದ ನಿಂದಿಸಿ ಧಮಕಿ ಹಾಕಿ ಗೂಂಡಾಗಿರಿ ತೋರಿದ್ದಾರೆ ಎಂದು ಅವರು ಆಪಾದಿಸಿದರು.

ಸಂಕೇಶ್ವರ ಎಸ್‌ಡಿವಿಎಸ್ ಸಂಸ್ಥೆಯ ಶಿಕ್ಷಕರು ಮತ್ತು ಶಿಕ್ಷಕೇತರ ನೇಮಕಾತಿಯಲ್ಲಿ ಎ.ಬಿ.ಪಾಟೀಲ ಭ್ರಷ್ಟಾಚಾರ ಎಸಗಿದ್ದಾರೆ. ಪಂತ ಬಾಳೇಕುಂದ್ರಿ ನೂಲಿನ ಗಿರಣಿಯಲ್ಲಿ ದುರಾಡಳಿತ ನಡೆಸಿದರು. ಚಾಡಿಕೋರರ ಮಾತು ಕೇಳುವ ಎಬಿಪಿ ಚುನಾವಣೆ ಕಾಲದ ಅತಿಥಿ ಎಂದು ವಾಗ್ದಾಳಿ ನಡೆಸಿದರು.

## 93 ಲಕ್ಷ ರೂ. ಜಪ್ತಿ



ಉತ್ತರ ಕನ್ನಡ: ರಾಜ್ಯ ಚುನಾವಣೆಯ ಕಾವು ದಿನದಿಂದ ದಿನಕ್ಕೆ ರಂಗೇರುತ್ತಿದ್ದು, ಎಲ್ಲೆಲ್ಲೂ ಭರ್ಜರಿ ಪ್ರಚಾರ ನಡೆಯುತ್ತಿದೆ. ಚುನಾವಣೆಗಳಲ್ಲಿ ಅಕ್ರಮಗಳನ್ನು ತಡೆಯಲು, ಪಾರದರ್ಶಕವಾಗಿ ಚುನಾವಣೆಯನ್ನು ನಡೆಸಲು ಎಲೆಕ್ಷನ್ ಕಮಿಷನ್ ಇನ್ನಿಲ್ಲದ ಕಸರತ್ತು ನಡೆಸುತ್ತಿದೆ.

ಜಿಲ್ಲೆಯ ಹೊನ್ನಾವರ ತಾಲೂಕಿನ ಚಂದಾವರ ಚೆಕ್ ಪೋಸ್ಟ್‌ನಲ್ಲಿ ಬರೋಬ್ಬರಿ 93 ಲಕ್ಷ ರೂ. ಹಣವನ್ನು ಪೊಲೀಸ್ ಅಧಿಕಾರಿಗಳು ಸೀಜ್ ಮಾಡಿದ್ದಾರೆ. ಯಾವುದೇ ದಾಖಲೆ ಇಲ್ಲದೇ ಲಕ್ಷಾಂತರ ರೂಪಾಯಿ ಹಣವನ್ನು ಆಟೋದಲ್ಲಿ ಸಾಗಿಸಲಾಗುತ್ತಿತ್ತು.

ಪೊಲೀಸ್ ಅಧಿಕಾರಿಗಳು ತಪಾಸಣೆ ವೇಳೆ ದಾಖಲೆ ಇಲ್ಲದ 93 ಲಕ್ಷ ರೂಪಾಯಿ ಹಣ ಪತ್ತೆಯಾಗಿದೆ. ಮತದಾರರಿಗೆ ಹಂಚಲು ಹಣವನ್ನು ತರಲಾಗುತ್ತಿತ್ತು ಎಂದು ಹೇಳಲಾಗುತ್ತಿದೆ. ಇಷ್ಟೊಂದು ಹಣವನ್ನು ಶಿವಮೊಗ್ಗದಿಂದ ಕುಮಟಾಕ್ಕೆ ಸಾಗಿಸಲಾಗುತ್ತಿತ್ತು ಎನ್ನಲಾಗಿದೆ.

## ಕಾಯ್ದಿಟ್ಟ ಅರಣ್ಯ ನಾಶಪಡಿಸಿದ ಆರೋಪಿತರ ಮೇಲೆ ಕಾನೂನು ಕ್ರಮ



ಖಾನಾಪುರ: ತಾಲೂಕಿನ ಭೀಮಗಡ ಅಭಯಾರಣ್ಯ ವ್ಯಾಪ್ತಿಯ ಅಮಗಾಂವ ಕಾಯ್ದಿಟ್ಟ ಅರಣ್ಯಕ್ಕೆ ಬೆಂಕಿ ಹಾಕಿ ವನ್ಯಜೀವಿಗಳ ಪ್ರದೇಶ ಹಾಳುಗೆಡವಿದ ಹಿನ್ನೆಲೆಯಲ್ಲಿ ಐವರು ಆರೋಪಿತರ ವಿರುದ್ಧ ಅರಣ್ಯ ಇಲಾಖೆಯವರು ಕಾನೂನು ಕ್ರಮ ಜರುಗಿಸಿದ್ದಾರೆ.

ಆರೋಪಿತರಿಗೆ ಅರಣ್ಯಾಧಿಕಾರಿಗಳು ನೋಟಿಸ್ ಜಾರಿ ಮಾಡಿ ಕರೆಸಿ ತನಿಖೆ ಕೈಗೊಂಡಾಗ ಆರೋಪಿಗಳು ಅರಣ್ಯ ಪ್ರದೇಶದ ಸರ್ವೆ ನಂ.7ನ್ನು ಅತಿಕ್ರಮಣ ಮಾಡಿ ಮರ ಕಡಿದು ಬೆಂಕಿ ಹಚ್ಚಿದ್ದನ್ನು ಒಪ್ಪಿಕೊಂಡಿದ್ದಾರೆ. ಈ ಜಾಗದಲ್ಲಿ ಆರೋಪಿಗಳು 30- 35 ವರ್ಷಗಳಿಂದ ಗೋಡಂಬಿ ಕೃಷಿ ಮಾಡುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ. ಆದ-ರೆ ಆರೋಪಿತರು ತಾವು 75 ವರ್ಷಗಳಿಂದ ಗೋಡಂಬಿ ಕೃಷಿ ಮಾಡಿಕೊಂಡು ಬಂದಿರುವುದಾಗಿ ತಿಳಿಸಿದ್ದಾರೆ.

## ಕಾರ್ಯಕರ್ತರೆ ಬಿಜೆಪಿ ಪಕ್ಷದ ಆಸ್ತಿ: ಶಾಸಕ ಶ್ರೀಮಂತ ಪಾಟೀಲ



ಕಾಗವಾಡ: ಒಂದು ಮರ ಹೆಮ್ಮರವಾಗಿ ಬೆಳೆಯಬೇಕಾದರೆ ಅದರ ಬೇರುಗಳು ಗಟ್ಟಿಯಾಗಿರಬೇಕು ಅದರಂತೆ ಭಾರತೀಯ ಜನತಾ ಪಕ್ಷ ನಿಷ್ಠಾವಂತ ಕಾರ್ಯಕರ್ತರಿಂದ ಪಕ್ಷ ಇಷ್ಟೊಂದು ದೊಡ್ಡ ಪಕ್ಷವಾಗಿ ಹೊರ ಹೊಮ್ಮಿ ಅನೇಕ ರಾಜ್ಯಗಳಲ್ಲಿ ಅಧಿಕಾರ ನಡೆಸುತ್ತಿದೆ. ಬಿಜೆಪಿಗೆ ಕಾರ್ಯಕರ್ತರೆ ಪಕ್ಷದ ಆಸ್ತಿ ಎಂದು ಕಾಗವಾಡ ಶಾಸಕ ಶ್ರೀಮಂತ ಪಾಟೀಲ ಹೇಳಿದರು.

ಅವರು ಗುರುವಾರ 27 ರಂದು ಐನಾಪೂರ ಪಟ್ಟಣದ ಬಿಜೆಪಿ ಕಚೇ-ರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತ ನಾನು ಎಲ್ಲ ಪಕ್ಷಗಳಲ್ಲಿ ಇದ್ದು ಬಂದಿದ್ದೆನೆ ಅದ- ರ ಬಿಜೆಪಿ ಪಕ್ಷದಲ್ಲಿನ ಕಾರ್ಯ ಕ್ಷಮತೆ, ಶಿಸ್ತು ಹಾಗೂ ಪಕ್ಷ ನಿಷ್ಠೆ ಎಲ್ಲೂ ಕಾಣಿಸಿಗಲ್ಲಾ ಕೇಂದ್ರದಲ್ಲಿ ಹಾಗೂ ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಡಬಲ್ ಇಂಜಿನ ಸರಕಾರವಾಗಿದ್ದು ಅದರ ಯೋಜನೆ ಹಾಗೂ ಸಾಧನೆಗಳನ್ನು ಮತದಾರರ ಪ್ರತಿ ಮನೆ ಮನೆಗೆ ತಲುಪಿಸಿಬೇಕು.

ಈ ಪಕ್ಷದಲ್ಲಿ ಸಮಾನ್ಯ ಕಾರ್ಯಕರ್ತನಿಗೂ ಮುಂದೊಂದು ದಿನ ಒಳ್ಳೆಯ ಅವಕಾಶ ಇದೆ.

ನಾನು ಕ್ಷೇತ್ರದ ಬಿಜೆಪಿ ಕಾರ್ಯಕರ್ತರನ್ನು ನನ್ನ ಸ್ವಂತ ಮಕ್ಕಳ ಹಾಗೆ ನೋಡಿದ್ದೆನೆ. ನನ್ನ ಅವಧಿಯಲ್ಲಿ ಯಾವುದೇ ಜಾತಿ ರಾಜಕಾರಣ ಮಾಡಿಲ್ಲ ಬಡವ ಮಂತ ಎಂಬ ದೇವ ಭಾವ ಮಾಡಿಲ್ಲ ಪ್ರತಿಯೊಬ್ಬರ ಕಷ್ಟದಲ್ಲಿ ಭಾಗಿಯಾಗಿದೆನೆ.

ನನ್ನ ಬಳಿ ಯಾವುದೇ ಮುಖಂಡರ ಮೂಲಕ ಬರದೆ ನೇರವಾಗಿ ಭೇಟಿಯಾಗಿ ಸಮಸ್ಯೆ ಹೇಳಿಕೊಂಡರು ಅದನ್ನು ಪರಿಹ-ರಿಸುತ್ತಾ ಬಂದಿದ್ದೆನೆ ಎಂದು ಹೇಳಿದರು.

ಮುಖಂಡ ಮೋಹನ ಮುತಾಲಿಕ ಮಾತನಾಡುತ್ತ ಚುನಾವಣೆಯಲ್ಲಿ ಸ್ಪರ್ಧಿಸಿದ ಅಭ್ಯರ್ಥಿಗಳಲ್ಲಿ ಅವರ ಗುಣಲಕ್ಷಣಗಳನ್ನು ಪರಾಮರ್ಶಿಸಿ ಅಭಿವೃದ್ಧಿ ಎಡೆಗೆ ಮುನ್ನಡೆಸುವ ವ್ಯಕ್ತಿಯನ್ನು ಯಾವಾಗಲು ಮರೆಬಾರದು. ಬರುವ ಚುನಾವಣೆಯಲ್ಲಿ ಸೂಕ್ತ ಅಭ್ಯರ್ಥಿ ಶ್ರೀಮಂತ ಪಾಟೀಲ ಅವರನ್ನು ಆಯ್ಕೆ ಮಾಡೋಣ ಎಂದು ಹೇಳಿದರು.

ರೈತ ಮುಖಂಡ ದಾದಗೌಡ ಪಾಟೀಲ ಮಾತನಾಡುತ್ತ ಕಳೆದ 60 ವರ್ಷಗಳಲ್ಲಿ ಕಂಡ ಅರಿಯದ ಅಭಿವೃದ್ಧಿ ಹೊಳೆಯನ್ನೆ ಹರಸಿರುವ ಶ್ರೀಮಂತ ಪಾಟೀಲರು ಕಾಗವಾಡ ಮತ ಕ್ಷೇತ್ರದಲ್ಲಿ 3000 ಸಾವಿರ ಕೋಟಿ ಹಾಗೂ ಐನಾಪೂರ ಪಟ್ಟಣಕ್ಕೆ 100 ಕೋಟಿಗು ಹೆಚ್ಚು ಅನುದಾನ ತಂದು ಅಭಿವೃದ್ಧಿ ಪಡಿಸಿದ್ದಾರೆ ಕಾರ್ಯಕರ್ತರು ಹೆಚ್ಚಿನ ಅಂತರದಿಂದ ಅವರನ್ನು ಗೆಲ್ಲಿಸಿಕೊಂಡು ಬರುವ ಜವಾಬ್ದಾರಿ ಇದೆ ಎಂದು ಹೇಳಿದರು.

ಈವೇಳೆ ಯುವ ಮುಖಂಡ ಯೋಗೇಶ ಪಾಟೀಲ ,ಮಂಡಲ ಅಧ್ಯಕ್ಷ ತಮ್ಮಣ್ಣ ಪಾರಶೆಟ್ಟಿ, ಮುಖಂಡರಾದ ನಾರಾಯಣ ಕಟ್ಟಿ,ಡಾ.ಎಂ ಎಸ್ ಕಾರ್ಜಿ ರಾಜೇಂದ್ರ ಪೋತದಾರ,ರವಿ ಪಾರಶೆಟ್ಟಿ ನವಲಪ್ಪಾ ಹಾಲಾರೋಟ್ಟಿ, ಉದಯ ನಿಡಗುಂದಿ ,ನಿಂಗಪ್ಪಾ ಚೌಗಲಾ,ಅಣ್ಣಾಸಾಬ ಡೂಗನವರ ಉದಯ ಮಾನೆ ,ಅನೀಲ ಸಾವಳಿ,ಪಿಂಟು ಪಾರಶೆಟ್ಟಿ ಪ್ರವೀಣ ಕುಲಕರ್ಣಿ, ಸಂತೋಷ ಭೋವಿ, ಅಡಿವೆಪ್ಪಾ ಐಹೋಳೆ,ಸದಾಶಿವ ಹರಳೆ, ಸಿದರಾಯ ದೊಡಮನಿ, ರತನಗೌಡ ಪಾಟೀಲ, ಶ್ರೀಶೈಲ ನಾಂದಣಿಕರ, ಪ್ರಕಾಶ ಚಿನಗಿ, ಸೇರಿದಂತೆ ಅಪಾರ ಕಾರ್ಯಕರ್ತರು ಇತರರು ಇದ್ದರು.

## ಮಹರ್ಷಿ ಭಗಿರಥರ ಜಯಂತಿ ಆಚರಣೆ



ಬೆಳಗಾವಿ: ನಗರದ ಬಸವರಾಜ್ ಕಟ್ಟಿಮನಿ ಸಭಾಭವನದಲ್ಲಿ ಮಹರ್ಷಿ ಭಗೀರಥ ಮಹಾರಾಜರ ಜಯಂತಿಯನ್ನು ಸರಳವಾಗಿ ಆಚರಣೆ ಮಾಡಲಾಯಿತು.

ಬೆಳಗಾವಿಯ ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತ ಇಲಾಖೆ ಸಹಭಾಗಿತ್ವದಲ್ಲಿ ನಡೆದ ಈ ಜಯಂತಿಯಲ್ಲಿ ಮಹರ್ಷಿ ಭಗೀರಥರ ಆದರ್ಶ, ಸಾಧನೆ, ಅವರ ಜೀವನ ಚರಿತ್ರೆಗಳ ವಿವರಣೆ ಮಾಡಲಾಗಿ, ಪ್ರಸ್ತುತ ಸಮಾಜಕ್ಕೆ ಅವು ಅತ್ಯಂತ ಅವಶ್ಯ ಎಂಬ ಮಾಹಿತಿ ನೀಡಲಾಯಿತು..

ಈ ಜಯಂತಿ ಕಾರ್ಯಕ್ರಮದಲ್ಲಿ ವಿದ್ಯಾವತಿ ಭಜಂತ್ರಿ, ಶ್ರೀರಂಗ ಜೋಶಿ, ಜಿ ಎಸ್ ಉಪ್ಪಾರ, ಬಿ ಪಿ ಮೆಲ್ಮಟ್ಟಿ, ಮಂಜುನಾಥ ರಾಜಪ್ಪನವರ, ಲಾತುರ್, ಚಂದ್ರಶೇಖರ್ ಅಳಗೊಡಿ, ರೇಖಾ ಲಕ್ಕುಂಡಿ, ಲಕ್ಷ್ಮಿ ಗೋಟುರ, ಉಮಾ ಉಪ್ಪಾರ, ರವಿ ಉಪ್ಪಾರ, ಮತ್ತಿತರರು ಭಾಗಿಯಾಗಿದ್ದರು.

## ಯುವ ನಾಯಕ ರಾಹುಲ್ ಜಾರಕಿಹೊಳಿ ಮತಯಾಚನೆ



ಯಮಕನಮರಡಿ : ಯಮಕನಮರಡಿ ಮತಕ್ಷೇತ್ರದಲ್ಲಿ ಅಭಿವೃದ್ಧಿ ಕೆಲಸಗಳ ಮೂಲಕ ಜನರ ಮನಸ್ಸು ಗೆದ್ದಿರುವ ತಂದೆ, ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಅವರಿಗೆ ಅಪಾರ ಸಂಖ್ಯೆಯ ಜನ ಬೆಂಬಲ ದೊರೆಯುತ್ತಿದೆ ಎಂದು ಯುವ ನಾಯಕ ರಾಹುಲ್ ಜಾರಕಿಹೊಳಿ ಅವರು ಹೇಳಿದರು.

ಯಮಕನಮರಡಿ ವಿಧಾನಸಭಾ ಮತಕ್ಷೇತ್ರದ ಕುರಣಿ, ಕುರಣಿವಾಡಿ, ಹಂಚಿನಾಳ, ಚಿಕ್ಕಾಲಗುಡ್ಡ ಗ್ರಾಮಗಳಲ್ಲಿ ತಂದೆಯವರಾದ ಹಾಗೂ ಕೆಪಿಸಿಸಿ ಕಾರ್ಯಾಧ್ಯಕ್ಷ, ಶಾಸಕ ಸತೀಶ್ ಜಾರಕಿಹೊಳಿ ಅವರ ಪರ ಮತಯಾಚಿಸಿ ಅವರು ಮಾತನಾಡಿದರು.

ಕಳೆದ 15 ವರ್ಷಗಳ ಅವಧಿಯಲ್ಲಿ ಯಮಕನಮರಡಿ ಯನ್ನು ಮಾದರಿ ಕ್ಷೇತ್ರವನ್ನಾಗಿ ಮಾಡಿದ ಕೀರ್ತಿ ತಂದೆಯವರಿಗೆ ಸಲ್ಲುತ್ತದೆ.

ಈ ಬಾರಿಯೂ ಜನ ಆಶೀರ್ವಾದ ಮಾಡುವ ಮೂಲಕ ಮತ್ತೊಮ್ಮೆ ಶಾಸಕ ಸತೀಶ್ ಜಾರಕಿಹೊಳಿ ಅವರಿಗೆ ಜನ ಸೇವೆ ಮಾಡಲು ಅವಕಾಶ ನೀಡಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಇದೇ ವೇಳೆ ಕುರಣಿ, ಕುರಣಿವಾಡಿ, ಹಂಚಿನಾಳ, ಚಿಕ್ಕಾಲಗುಡ್ಡ ಗ್ರಾಮಗಳಲ್ಲಿ ಯುವ ನಾಯಕ ರಾಹುಲ್ ಜಾರಕಿಹೊಳಿ ಅವರನ್ನು ಮಹಿಳೆಯರು ಸ್ವಾಗತಿಸಿ ಕುಂಕುಮ ಹಚ್ಚಿ ಆರತಿ ಬೆಳಗಿದರು. ಅಪಾರ ಸಂಖ್ಯೆಯ ಯುವಕರು ಯುವ ನಾಯಕ ರಾಹುಲ್ ಜಾರಕಿಹೊಳಿ ಅವ-ರಿಗೆ ಮತಯಾಚಿಸಲು ಸಾಥ್ ನೀಡಿದರು.

ಈ ಸಂದರ್ಭದಲ್ಲಿ ಯಮಕನಮರಡಿ ವಿಧಾನಸಭಾ ಮತಕ್ಷೇತ್ರದ ಕುರಣಿ, ಕುರಣಿವಾಡಿ, ಹಂಚಿನಾಳ, ಚಿಕ್ಕಾಲಗುಡ್ಡ ಗ್ರಾಮಗಳ ಕಾಂಗ್ರೆಸ್ ಮುಖಂಡರು, ಯುವಕರು, ಮಹಿಳೆಯರು ಇದ್ದರು.

## ಸಿಡಿಲು ಬಡಿದು ಸ್ಥಳದಲ್ಲೇ ವ್ಯಕ್ತಿ ಸಾವು



ಮಹಾರಾಷ್ಟ್ರ: ನಡೆದುಕೊಂಡು ಹೋಗುತ್ತಿದ್ದ ವ್ಯಕ್ತಿಯೊಬ್ಬರು ಸಿಡಿಲು ಬಡಿದು ಸ್ಥಳದಲ್ಲೇ ಸಾವನ್ನಪ್ಪಿದ ಆಘಾತಕಾರಿ ಘಟನೆ ಮಹಾರಾಷ್ಟ್ರದಲ್ಲಿ ನಡೆದಿದೆ ಎಂದು ವರದಿಯಾಗಿದೆ. ಮೃತರು ಬಿಹಾರ ಮೂಲದ ಬಾಬುಧನ್ ಯಾದವ್ ಎಂದು ವರದಿಯಾಗಿದೆ. ಚಂದ್ರಾಪುರ ಜಿಲ್ಲೆಯ ಭದ್ರಾವತಿ ತಾಲೂಕಿನ ಮಜ್ರಿ ಪ್ರದೇಶದಲ್ಲಿನ ಪಶ್ಚಿಮ ಕಲ್ಲಿದ್ದಲು ಗಣಿಯಲ್ಲಿ ಕೆಲಸ ಮಾಡುವ ಕಾರ್ಮಿಕ ನಡೆದುಕೊಂಡು ಹೋಗುತ್ತಿರುತ್ತಾರೆ.

ಈ ವೇಳೆ ಪ್ರಕಾಶಮಾನವಾದ ಮಿಂಚು, ಸಿಡಿಲು ಆತನಿಗೆ ಬಡಿದಿದ್ದು, ಸ್ಥಳದಲ್ಲೇ ಕುಸಿದು ಬಿದ್ದಿದ್ದಾರೆ.

ಈ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ದಾಖಲಾಗಿದೆ. ಇದೀಗ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಸಿಡಿಲು ನೇರವಾಗಿ ವ್ಯಕ್ತಿಯ ಮೇಲೆ ಬಡಿಯುವ ದೃಶ್ಯ ಭಯ ಹುಟ್ಟಿಸುತ್ತದೆ. ಈ ವಿಡಿಯೋ ನೋಡಿ ನೆಟ್ಟಿಗರು ಶಾಕ್ ಆಗಿದ್ದಾರೆ. ಸಿಡಿಲು ಬಡಿದ ಪ್ರದೇಶ ಸಂಪೂರ್ಣ ಸುಟ್ಟು ಕರಕಲಾಗಿದೆ.

## ರಕ್ತದಲ್ಲಿ ಪತ್ರ ಬರೆದಿದ್ದ ಅಭಿಮಾನಿ ನಿವಾಸಕ್ಕೆ ಜಗದೀಶ್ ಶೆಟ್ಟರ್ ಭೇಟಿ



ಹುಬ್ಬಳ್ಳಿ: ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ನಲ್ಲಿ ಜಗದೀಶ್ ಶೆಟ್ಟರ್ ಅವರು 100ಕ್ಕೆ 100 ಗೆಲ್ಲುತ್ತಾರೆ ಎಂದು ರಕ್ತದಲ್ಲಿ ಪತ್ರ ಬರೆದಿದ್ದ ಯುವಕ ಮಂಜುನಾಥನ ನಿವಾಸಕ್ಕೆ ಇಂದು ಮಾಜಿ ಸಿಎಂ ಜಗದೀಶ್ ಶೆಟ್ಟರ್ ಭೇಟಿ ನೀಡಿದ್ದಾರೆ.

ಯಡಿಯೂರಪ್ಪ ರಕ್ತದಲ್ಲಿ ಬರೆದು ಕೊಡುತ್ತೇನೆ ಶೆಟ್ಟರ್ ಗೆಲ್ಲುವುದಿಲ್ಲ ಎಂದು ಯಡಿಯೂರಪ್ಪ ಹೇಳಿಕೆ ನೀಡಿದ್ದರು. ಇದಕ್ಕೆ ಪ್ರತಿಯಾಗಿ ಕಾಂಗ್ರೆಸ್ ಕಾರ್ಯಕರ್ತ ಮಂಜುನಾಥ ಎನ್ನುವ ಯುವಕ 100ಕ್ಕೆ 100 ಜಗದೀಶ್ ಶೆಟ್ಟರ್ ಗೆಲ್ಲುತ್ತಾರೆ ಎಂದು ರಕ್ತದಲ್ಲಿ ಪತ್ರ ಬರೆದು ತಿರುಗೇಟು ನೀಡಿದ್ದ. ಇದೀಗ ಮಂಜುನಾಥನ ಮನೆಗೆ ಜಗದೀಶ್ ಶೆಟ್ಟರ್ ಭೇಟಿ ನೀಡಿದ್ದು, ತಮ್ಮ ಗೆಲುವಿಗಾಗಿ ರಕ್ತದಲ್ಲಿ ಶುಭ ಹಾರೈಸಿದ ಮಂಜುನಾಥನಿಗೆ ಸನ್ಮಾನಿಸಿ ಕೃತಜ್ಞತೆ ತಿಳಿಸಿದರು.

ಹುಬ್ಬಳ್ಳಿ-ಧಾರವಾಡ ಸೆಂಟ್ರಲ್ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮಂಜುನಾಥ ಮನೆಗೆ ಜಗದೀಶ್ ಶೆಟ್ಟರ್ ಭೇಟಿ ನೀಡಿ ಅಭಿಮಾನ ತೋರದಕ್ಕೆ ಸನ್ಮಾನ ಮಾಡಿದರು. ಇದೇ ವೇಳೆ ಮಂಜುನಾಥ ಸಹ ಚುನಾವಣೆಯಲ್ಲಿ ಗೆಲುವಾಗಲಿ ಎಂದು ಜಗದೀಶ್ ಶೆಟ್ಟರ್ ಅವರಿಗೆ ಶುಭ ಹಾರೈಸಿದರು.

## ಹಲವು ಮುಖಂಡರು ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆ



ಬೆಳಗಾವಿ: ಹಿರೇಬಾಗೇವಾಡಿ ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಹಲವಾರು ಬಿಜೆಪಿ ಮುಖಂಡರು ಹಾಗೂ ನೂರಾರು ಕಾರ್ಯಕರ್ತರು ಬಿಜೆಪಿಗೆ ಗುಡ್ ಬೈ ಹೇಳಿ ಬೆಳಗಾವಿಯ ಶಾಸಕಿ ಲಕ್ಷ್ಮೀ ಹೆಬ್ಬಾಳಕರ್ ಅವರ ಕಚೇರಿಯಲ್ಲಿ ಗುರುವಾರ ಕಾಂಗ್ರೆಸ್ ಸೇರಿದ್ದಾರೆ.

ಮುಖಂಡರುಗಳಾದ ದಯಾನಂದ ಹಂಚಿನಮನಿ, ಬಸವರಾಜ ಹಂಚಿನಮನಿ, ಬಾಬು ಮುಸೆನ್ನವರ, ಅಜ್ಜಪ್ಪ ಮುಗಪ್ಪಗೋಳ, ನಾಗಪ್ಪ ಕಲಭಾಂವಿ, ನಿಜಲಿಂಗ ಅಂಗಡಿ, ಮಲ್ಲಪ್ಪ ಕಬ್ಬೂರ, ದೊಡ್ಡಯ್ಯ ಹಿರೇಮಠ, ಚಂದ್ರು ತಳವಾರ, ಮಾಂತಯ್ಯ ಹಿರೇಮಠ, ಉದಯ ಹುಲಮನಿ, ಬಾಳೇಶ ಕಕ್ಕಾಳಿ ಮತ್ತು ಅಪಾರ ಸಂಖ್ಯೆಯಲ್ಲಿ ಕಾರ್ಯಕರ್ತರು ಕಾಂಗ್ರೆಸ್ ಸೇರ್ಪಡೆಯಾದರು.

ಕಾಂಗ್ರೆಸ್ ಪಕ್ಷದ ತತ್ವ ಸಿದ್ಧಾಂತಗಳನ್ನು ಒಪ್ಪಿಕೊಂಡು, ವಿಶೇಷವಾಗಿ ಬೆಳಗಾವಿ ಗ್ರಾಮೀಣ ಕ್ಷೇತ್ರದಲ್ಲಿ ಶಾಸಕಿ ಲಕ್ಷ್ಮೀ ಹೆಬ್ಬಾಳಕರ್ ಅವರ ಕೆಲಸಗಳನ್ನು ಮೆಚ್ಚಿಕೊಂಡು ಕಾಂಗ್ರೆಸ್ ಸೇರುತ್ತಿರುವುದಾಗಿ ಇವರೆಲ್ಲ ಈ ಸಂದರ್ಭದಲ್ಲಿ ತಿಳಿಸಿದರು. ಬರಲಿರುವ ಚುನಾವಣೆಯಲ್ಲೂ ದೊಡ್ಡ ಅಂತರ ಎಲ್ಲರನ್ನು ಆತ್ಮೀಯವಾಗಿ ಪಕ್ಷಕ್ಕೆ ಬರಮಾಡಿಕೊಂಡ ಶಾಸಕಿ ಲಕ್ಷ್ಮೀ ಹೆಬ್ಬಾಳಕರ್, ಇವರೆಲ್ಲರ ಆಗಮನದಿಂದ ಕಾಂಗ್ರೆಸ್ ಪಕ್ಷ ಮತ್ತಷ್ಟು ಬಲಗೊಳ್ಳಲಿದ್ದು, ಪಕ್ಷದ ಸಂಘಟನೆಗೆ ಹೊಸ ಚೈತನ್ಯವನ್ನು ತುಂಬಲಿದ್ದಾರೆ. ಬರಲಿರುವ ವಿಧಾನಸಭೆ ಚುನಾವಣೆಯಲ್ಲಿ ಭಾರೀ ಅಂತರದಿಂದ ನನ್ನ ಗೆಲುವು ನಿಶ್ಚಯವಾಗಿದ್ದು, ಕ್ಷೇತ್ರವನ್ನು ಇನ್ನಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯುವ ಸಂಕಲ್ಪ ಮಾಡಿದ್ದೇನೆ.

ಇದಕ್ಕೆ ಎಲ್ಲರ ಸಹಕಾರವಿರಲಿ ಎಂದು ವಿನಂತಿಸಿದರು. ವಿಧಾನ ಪರಿಷತ್ ಸದಸ್ಯ ಚನ್ನರಾಜ ಹಟ್ಟಿಹೊಳಿ, ಬೆಳಗಾವಿ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಡಿವೇಶ ಇಟಗಿ ಸೇರಿದಂತೆ ಹಲವು ಮುಖಂಡರು ಈ ಸಂದರ್ಭದಲ್ಲಿ ಉಪಸ್ಥಿತ-ರಿದ್ದರು.

BELAGAVI VARADI KANNADA DAILY MORNING : Editor, Printer, Publisher & Owned By : **Satish Basavani Gudagenatti,** Basavani House No.53, Ashray Colony, Sarathi Nagar, Tv Center - 590019, TQ & DIST Belagavi, Karnataka.
Printed At : LAXMI PRINTERS, No.627. Auto Nagar - 590016.TQ & DIST Belagavi, Karnataka Mob : 9900332089